ಜನಪ್ರಿಯ ಕಲಾಮಾಲಿಕೆ

ದೃಶ್ಯಕಲೆ ಎಂದರೇನು?



ಚಿ. ಸು. ಕೃಷ್ಣ ಸೆಟ್ಟಿ

ಕರ್ನಾಟಕ ಲಲಿತಕಲಾ ಅಕಾದೆಮಿ

ದೃಶ್ಯ ಕಲೆ ಎಂದರೇನು?

ಚಿ. ಸು. ಕೃಷ್ಣಸೆಟ್ಟಿ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560 002

DRUSHYA KALE ENDARENU
by Chi. Su. Krishnasetty
Published by K. Mukundan, Registrar
Karnataka Lalithakala Academy
Nrupatunga Road, Bangalore-560 002

First Impression : 1995

ಬೆಲೆ : ರೂ. 5-00

ಮುಖಚಿತ್ರ : **ಎನ್ ಪುಷ್ಪಮಾಲ**

ಸಂಪಾದಕರು : **ಚಿ. ಸು. ಕೃಷ್ಣಸೆಟ್ಟಿ**

ಮುದ್ರಣ
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು-18
ದೂರವಾಣಿ: 6618752, 6613123

ಒಂದು ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದುವರೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಅಕಾಡೆಮಿಯು ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಸುಲಭ ದರದಲ್ಲಿ ಜನಸಾಮಾನ್ಯರಿಗೂ ಕಲೆಯು ಅರ್ಥವಾಗಲಿ ಎಂಬ ಉದ್ದೇಶದಿಂದ ದೃಶ್ಯಕಲೆ, ಕಲೆಯ ರಸಸ್ವಾದನೆ, ಕಲಾ ಪಂಥಗಳು ಈ ವಿಷಯವಾಗಿ ಕಿರು ಪುಸ್ತಕಗಳನ್ನು ಹೊರತರುತ್ತಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಓದುವುದರಿಂದ ಜನಸಾಮಾನ್ಯರಲ್ಲಿ ಕಲಾ ಇತಿಹಾಸವನ್ನು ಪರಿಚಯಿಸುತ್ತಾ ಕಲಾಕೃತಿಯನ್ನು ನೋಡಿ, ಗ್ರಹಿಸಿ, ರಸಸ್ವಾದನೆ ಮಾಡಿ ಗುಣ ಮೌಲ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಉತ್ತಮ ಗುಣ ಮೌಲ್ಯವುಳ್ಳ ಕಲಾಕೃತಿಯನ್ನು ಸಂಗ್ರಹಿಸುವಲ್ಲಿ ಆಸಕ್ತಿ ಮೂಡುತ್ತದೆಯೆಂಬ ಆಶಯ ನಮ್ಮದಾಗಿದೆ.

ಈ ಮಾಲಿಕೆಯಲ್ಲಿ ಪುಸ್ತಕಗಳನ್ನು ಚಿತ್ರಯಾತ್ರೆಯ ಸಂದರ್ಭದಲ್ಲಿ ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ. ಚಿತ್ರಯಾತ್ರೆಯು ನಾಡಿನಾದ್ಯಂತ ಸಂಚರಿಸುವಾಗ ಎಲ್ಲಾ ಪುಸ್ತಕಗಳು ನಾಡಿನ ಮೂಲೆ ಮೂಲೆಗೂ ತಲುಪಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಮಾಲಿಕೆಯಲ್ಲಿ ಬರೆದಿರುವ ಲೇಖಕರೆಲ್ಲರೂ ಸಂಬಂಧಪಟ್ಟ ವಿಷಯದಲ್ಲಿ ಪರಿಣತರೇ ಆಗಿದ್ದಾರೆ. ನಮಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಿರುಹೊತ್ತಿಗೆಗಳನ್ನು ಬರೆದುಕೊಟ್ಟ ಕಲಾ ಲೇಖಕರಿಗೆ ಆಭಾರಿಯಾಗಿದ್ದೇವೆ. ನಮ್ಮ ಈ ಪ್ರಯತ್ನವನ್ನು ಕಲಾವಿದರೂ, ಕಲಾಸಕ್ತರೂ ತುಂಬು ಹೃದಯದಿಂದ ಸ್ವಾಗತಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

ಸಿ. ಚಂದ್ರಶೇಖರ
ಅಧ್ಯಕ್ಷರು

ದೃಶ್ಯ ಕಲೆ ಎಂದರೇನು?

ಕಲೆ ಎನ್ನುವುದು ಮಾನವನ ವೈಶಿಷ್ಟ್ಯ. ಅಂತೆಯೇ ನಮ್ಮ ಸುತ್ತಲಿನ ನಿಸರ್ಗ ಹಾಗೂ ದೈನಂದಿನ ಜನಜೀವನಗಳು, ಜನಸಾಮಾನ್ಯರಲ್ಲಿ ಪ್ರಭಾವ ಬೀರುವಂತೆ ಕಲಾವಿದನ ಮನಸ್ಸಿನ ಮೇಲೂ ಪ್ರಭಾವ ಬೀರುತ್ತದೆ. ಆದರೆ ಕಲಾವಿದನಲ್ಲಿರುವ ಆತನ ಸಂವೇದನೆಯು ಹೊರಗಿನ ಈ ಘಟನೆಗಳಿಗೆ ಹಾಗೂ ದೃಶ್ಯಗಳಿಗೆ ಉಳಿದವರಿಗಿಂತ ಭಿನ್ನವಾಗಿ, ಹೆಚ್ಚು ತೀವ್ರವಾಗಿ ಸ್ಪಂದಿಸುತ್ತದೆ. ಈ ಸ್ಪಂದನ ಹಾಗೂ ತುಡಿತಗಳು ಅವನ ಮಾಧ್ಯಮದ ಮೂಲಕ ಪ್ರಕಟವಾಗಿ ಕಲಾಕೃತಿಯೆನಿಸುತ್ತದೆ. ವಿವಿಧ ಕಲೆಗಳು ಮನುಷ್ಯನ ವಿವಿಧ ಇಂದ್ರಿಯಗಳಿಗೆ ಸಂಬಂಧಿಸಿ ತೃಪ್ತಿಕೊಡುತ್ತವೆ. ಹೀಗೆ ಸಂಗೀತ ಹಾಗೂ ಸಾಹಿತ್ಯಗಳು ಕಿವಿಗೆ ಸಂಬಂಧಿಸಿದ ಕಲೆಗಳಾಗಿವೆ. ಸಾಹಿತ್ಯವನ್ನು ಕಿವಿಯಿಂದ ಕೇಳುವಂತೆ ಕಣ್ಣಿನಿಂದ ಓದಿಯೂ ಸಂತಸ ಪಡಬಹುದು. ಆದರೆ ಸಂಗೀತಕ್ಕೆ ಕಿವಿಯೇ ಪ್ರಧಾನ ಇಂದ್ರಿಯವಾಗಿದೆ. ಇದರ ಹಾಗೆಯೇ ಚಿತ್ರಕಲೆ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳಂತಹ ಕಲೆಗಳು ಕಣ್ಣಿಗೆ ಸಂಬಂಧಿಸಿದವು.

ಎಲ್ಲ ನಿಜವಾದ ಕಲೆಗಳೂ ಮೂಲತಃ ಸೌಂದರ್ಯಾನುಭೂತಿಗೆ ಕಾರಣವಾಗುತ್ತವೆ. ಈ ಆಧುನಿಕ ಕಾಲದಲ್ಲಿ ಕಲೆಗಳನ್ನು ಲಲಿತ ಹಾಗೂ ಲಲಿತೇತರ ಎಂದು ಎರಡು ಮುಖ್ಯ ವಿಭಾಗಗಳನ್ನು ಮಾಡಿ ಗುರುತಿಸಲಾಗುತ್ತದೆ. ಆಭರಣ ಕಲೆ, ಜಾಹಿರಾತುಗಳು, ಕುಂಬಾರಿಕೆ, ಭಿತ್ತಿಪತ್ರಗಳು ಮುಂತಾದವುಗಳನ್ನು ಲಲಿತೇತರ ಕಲೆಗಳೆನ್ನುತ್ತೇವೆ. ಲಲಿತ ಕಲೆಗಳಲ್ಲಿ ಸೌಂದರ್ಯ ನಿರ್ಮಾಣವು ಉಪಯೋಗ ದೃಷ್ಟಿಯಿಲ್ಲದ ಆನಂದ ಪಡೆಯುವುದಕ್ಕೆ ಇರುತ್ತವೆ. ಇದೇ ರೀತಿ ಲಲಿತೇತರ ಕಲೆಗಳಲ್ಲಿ ಸೌಂದರ್ಯವಿದ್ದರೂ ಅವು ಒಂದು ನಿಶ್ಚಿತ ಕಾರಣದಿಂದ ಹಾಗೂ ಉಪಯೋಗದ ದೃಷ್ಟಿಯಿಂದಲೇ ನಿರ್ಮಾಣವಾಗುತ್ತವೆ. ಲಲಿತಕಲೆಗಳು ಒಟ್ಟು ಏಳು. ಚಿತ್ರಕಲೆ, ಶಿಲ್ಪಕಲೆ, ಸಾಹಿತ್ಯ, ಸಂಗೀತ, ನಾಟಕ, ನೃತ್ಯ ಹಾಗೂ ವಾಸ್ತುಶಿಲ್ಪಗಳನ್ನು ಲಲಿತಕಲೆಗಳೆಂದು ಗುರುತಿಸುತ್ತೇವೆ. ಲಲಿತಕಲೆಗಳ ಅಭಿವ್ಯಕ್ತಿ ವಿಧಾನದಲ್ಲಿ ಮೂರು ಮುಖ್ಯವಾದ ರೀತಿಗಳಿವೆ. ಹೀಗೆ ಕಾವ್ಯ ಹಾಗೂ ನಾಟಕಗಳನ್ನು ಶ್ರವ್ಯ ಕಲೆಗಳು ಎನ್ನುತ್ತೇವೆ. ನಾಟಕ ಪ್ರೇಕ್ಷ್ಯವೂ ಆಗಬಹುದು. ನೃತ್ಯ ಹಾಗೂ ಸಂಗೀತಗಳನ್ನು ಅಭಿನಯ ಕಲೆಗಳು ಎನ್ನುತ್ತೇವೆ. ಅಂತೆಯೇ ಚಿತ್ರ, ಶಿಲ್ಪ ಹಾಗೂ ವಾಸ್ತುಶಿಲ್ಪಗಳನ್ನು ದೃಶ್ಯ ಕಲೆಗಳು ಎನ್ನುತ್ತೇವೆ.

ಕಲೆಗಳನ್ನು ಕಾಲಬದ್ಧ (Temporal) ಹಾಗೂ ದೇಶಬದ್ಧ(Spatial) ಎಂದು ಎರಡು ವಿಭಾಗಗಳಾಗಿ ಗುರುತಿಸುವ ಪರಿಪಾಠವೂ ಇದೆ. ಹೀಗೆ ಸಂಗೀತ ಮತ್ತು ನಾಟಕಗಳನ್ನು ಕಾಲಬದ್ಧ ಎಂದು ಗುರುತಿಸುತ್ತೇವೆ. ಏಕೆಂದರೆ ಇವುಗಳಲ್ಲಿ ಕಾಲದ ಗತಿ ಇರುತ್ತದೆ. ಅಂದರೆ ಇವುಗಳಲ್ಲಿ ಚಲನೆಯಿದ್ದು, ಕಥೆ ಅಥವಾ ಘಟನೆಗಳು ಅನುಕ್ರಮವಾಗಿ ಸಾಗುವ ಕ್ರಿಯೆ ಇರುತ್ತದೆ. ಇಲ್ಲಿ ಒಂದು ಹಾಡನ್ನು ಕೇಳುವಾಗ ಅಥವಾ ಪುಸ್ತಕವನ್ನು ಓದುವಾಗ ಅಲ್ಲಿ ನಿರೂಪಿಸಿದ ಸಂಗತಿಗಳು ಮೂಡಿದ ನಂತರ ಕ್ರಮೇಣ ಮಾಯವಾಗುತ್ತ ಹೋಗುತ್ತವೆ. ಮುಂದೆ ಹಾಡು ಸಾಗಿದಂತೆ ಅಥವಾ ಪುಸ್ತಕದ ಓದು ಸಾಗಿದಂತೆ ಹಿಂದಿನ ಘಟನೆಗಳು ತಕ್ಷಣಕ್ಕೆ ನಮ್ಮ ಮುಂದೆ ಇರುವುದಿಲ್ಲ. ಅಂತೆಯೇ ಇವು ಕಾಲಬದ್ಧ ಕಲೆಗಳು. ಈ ಮಾಧ್ಯಮಗಳಿಂದ ಭಿನ್ನವಾಗಿರುವ ಚಿತ್ರ ಹಾಗೂ ಶಿಲ್ಪಗಳನ್ನು ದೇಶಬದ್ಧ ಕಲೆಗಳು, ಅಂದರೆ ಒಂದು ನಿಶ್ಚಿತ ಸ್ಥಳವನ್ನು ಶಾಶ್ವತವಾಗಿ ಆವರಿಸಿ, ಸ್ಥಿರವಾಗಿರುವ ಕಲೆಗಳೆಂದು ಗುರುತಿಸುತ್ತೇವೆ. ಇಲ್ಲಿ ಚಲನೆಯಿರುವುದಿಲ್ಲ. ಈ ಕಲೆಗಳಲ್ಲಿ ಅನುಕ್ರಮವಾದ ಕ್ರಿಯೆ ಇರುವುದಿಲ್ಲ. ಕ್ಷಣದಿಂದ ಕ್ಷಣಕ್ಕೆ, ಒಂದು ಘಟನೆಯಿಂದ ಇನ್ನೊಂದು ಘಟನೆಗೆ ಸಾಗುವ ಕಾಲದ ಕ್ರಿಯೆ ಇರುವುದಿಲ್ಲ. (ಚಿತ್ರಕಲೆಯಲ್ಲಿ ಸಂಗೀತ, ನೃತ್ಯಗಳಂತೆಯೇ ಕಾಲದ ಚಲನೆಯನ್ನು ಗುರುತಿಸುವಂತಹ 'ಫ್ಯೂಚರಿಸಂ' ಎನ್ನುವ ಕಲಾಪಂಥವೊಂದಿದೆ ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಬಹುದು). ಚಿತ್ರಕಲೆಯಲ್ಲಿ ಕಲಾಕೃತಿ ಪೂರ್ತಿಯಾಗಿ ಒಮ್ಮೆಲೇ ನಮ್ಮ ನೋಟಕ್ಕೆ ಸಿಗುತ್ತದೆ. ಇದು ಒಂದೊಂದು ಭಾಗವಾಗಿ ಪರಿಶೀಲನೆಗೆ ಸಿಗುವುದಾದರೂ ರಸಾನುಭವದ ದೃಷ್ಟಿಯಿಂದ ಸಮಗ್ರ ಕೃತಿ ನಮ್ಮ ಮುಂದೆ ಇರುತ್ತದೆ. ಕಾಲಬದ್ಧ ಕಲೆಗಳಲ್ಲಿ ಕೃತಿಗೆ ಹಿಂಚಲನೆ ಇರುವುದಿಲ್ಲ. ದೇಶಬದ್ಧ ಕಲೆಗಳಲ್ಲಿ ಮುಂದಕ್ಕೆ, ಹಿಂದಕ್ಕೆ ಅಥವಾ ಮೇಲಕ್ಕೆ ನೋಡುಗನ ಅಪೇಕ್ಷೆಯಂತೆ ಸಾಗಿ ಪರಿಶೀಲಿಸುವ ಅವಕಾಶವಿರುತ್ತದೆ.

ಲಲಿತಕಲೆಗಳಲ್ಲಿ ಒಂದು ಪ್ರಮುಖ ಪ್ರಕಾರವಾದ ಚಿತ್ರಕಲೆ ಎಂದರೇನು ಎನ್ನುವ ಬಗ್ಗೆ ಹಲವರಲ್ಲಿ ಗೊಂದಲವಿದೆ. ಏಕೆಂದರೆ ನಮ್ಮ ಪ್ರಾಚೀನರು ಸಾಮಾನ್ಯವಾಗಿ ಮಾಡಿದ ಕೆಲಸಗಳೆಲ್ಲವುಗಳಲ್ಲೂ ಪ್ರಯೋಜನವನ್ನೇ ಹೆಚ್ಚಾಗಿ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದರು. ಅಂತೆಯೇ ಚಿತ್ರಕಲೆಯೂ ಸೇರಿದಂತೆ ಇತರ ಕಲೆಗಳನ್ನೂ ಉಪಯೋಗದ ದೃಷ್ಟಿಯಿಂದಲೇ ಅವರು ಗಮನಿಸಿದರು. ಅವರ ದೃಷ್ಟಿಯಲ್ಲಿ ಚೆನ್ನಾಗಿ, ಅಚ್ಚುಕಟ್ಟಾಗಿ ಮಾಡುವ ಕೆಲಸಗಳೆಲ್ಲವೂ ಕಲೆ ಎಂದು ಕರೆಸಿಕೊಳ್ಳಲ್ಪಡುತ್ತಿತ್ತು. ಅಂತೆಯೇ ಲಲಿತೇತಹ ಹಾಗೂ ಉಪಯೋಗಿ ಕಲೆಗಳಾದ ಮರಗೆಲಸ, ಕುಂಬಾರಿಕೆ, ನೇಯ್ಗೆ, ಕಮ್ಮಾರನ ಕೆಲಸ, ಅಕ್ಕಸಾಲಿಗತನ ಇತ್ಯಾದಿಗಳೆಲ್ಲವೂ ಅವರ ದೃಷ್ಟಿಯಲ್ಲಿ ಕಲೆಯೇ ಆಗಿತ್ತು. ಕಲೆಯ ವ್ಯಾಖ್ಯೆ ಹಾಗೂ ಅದರ ಆಶಯಗಳ ಬಗ್ಗೆ ಈಗಿನಷ್ಟು ಚರ್ಚೆ ಆಗದಂತಹ ಆ ಸಂದರ್ಭದಲ್ಲಿ, ಅಂದರೆ ನಮ್ಮ ಪ್ರಾಚೀನರು ಕಲೆಗಳು ಅರವತ್ತನಾಲ್ಕು ಎಂದು ಗುರುತಿಸಿದ್ದರು. ರಾಜಕುಮಾರರಿಗೆ ಈ ಅರವತ್ತನಾಲ್ಕು ಕಲೆಗಳನ್ನು ಕಲಿಸಲಾಗುತ್ತಿತ್ತು ಎಂದು ಕಥೆಗಳಲ್ಲಿ ನಾವೆಲ್ಲ ಕೇಳಿದ್ದೇವೆ.

ನಮ್ಮ ಪ್ರಾಚೀನರ ಪ್ರಕಾರ ಚೌಷಷ್ಠಿ ಕಲೆಗಳು ಹೀಗಿವೆ. ಗೀತ(ಹಾಡುಗಾರಿಕೆ), ವಾದ್ಯ (ವಾದ್ಯಗಳನ್ನು ನುಡಿಸುವುದು), ನೃತ್ಯ(ನರ್ತಿಸುವುದು), ಆಲೇಖ್ಯ (ಚಿತ್ರಗಳನ್ನು ರಚಿಸುವುದು), ವಿಶೇಷ ಕಚ್ಛೇದ್ಯ (ಹಣೆಯ ಮೇಲೆ ತೊಡಲು ಆಗುವಂತೆ ವಿವಿಧಾಕೃತಿಗಳಲ್ಲಿ ಎಲೆ ಬಿಡಿಸುವುದು), ತಂಡುಲ ಕುಸುಮ ಬಲಿವಿಕಾರ (ಪೂಜೆಗಾಗಿ ಅಕ್ಕಿ ಮತ್ತು ಹೂಗಳನ್ನು ಬಗೆ ಬಗೆಯಾಗಿ ಜೋಡಿಸುವುದು), ಪುಷ್ಪಾಸ್ತರಣ (ಮನೆಯನ್ನೋ ಕೊಠಡಿಯನ್ನೋ ಹೂಗಳಿಂದ ಮುಚ್ಚುವುದು ಅಥವಾ ಅಲಂಕರಿಸುವುದು), ದಶನವಸನಾಂಗರಾಗ (ಹಲ್ಲುಗಳಿಗೂ - ಬಟ್ಟೆಗಳಿಗೂ ಮತ್ತು ಶರೀರಕ್ಕೂ ಬಣ್ಣಗಳನ್ನು ಹಚ್ಚುವುದು), ಮಣಿಭೂಮಿಕಾ ಕರ್ಮ (ರತ್ನಜಡಿತವಾದ ನೆಲಗಟ್ಟು ಮಾಡುವುದು; ಮೊಸಾಯಿಕ್ ಕೆಲಸ. 'ಗೊಂಬೆಗಳನ್ನು ಮಾಡುವುದು' ಎಂದೂ ಅರ್ಥೈಸಿದೆ), ಶಯನರಚನ (ಹಾಸಿಗೆಗಳನ್ನು ಮಾಡುವುದು), ಉದಕವಾದ್ಯ (ಮುರಜ ಮೊದಲಾದುದರ ದನಿಯಾಗುವಂತೆ ನೀರಿನ ಮೇಲೆ ಬಾಜಿಸುವುದು), ಉದಕಾಘಾತ(ಜಲಕ್ರೀಡೆಯಲ್ಲಿ ನೀರನ್ನು ಬೊಗಸೆಗಳಲ್ಲಿ ತುಂಬಿ ಇತರರ ಮೇಲೆ ಬಲವಾಗಿ ಎರಚುವುದು), ಚಿತ್ರಾಯೋಗ(ಮದ್ದು ಮೂಲಿಕೆಗಳಿಂದ, ಔಷಧಗಳಿಂದ, ಮಂತ್ರಗಳಿಂದ ಬೇರೆಯವರು ಕೃಶಕಾಯರೂ, ಅಕಾಲಿಕವಾಗಿ, ತಲೆ ನರೆತವರೂ, ಹುಚ್ಚರೂ ಮುಂತಾಗಿ ಆಗುವಂತೆ ಮಾಡುವುದು), ಮಾಲ್ಯಗ್ರಥನ ವಿಕಲ್ಪ (ಹಲವು ರೀತಿಗಳಲ್ಲಿ ಹೂವಿನ ಹಾರಗಳನ್ನು ಕಟ್ಟುವುದು), ಶೇಖರ ಕಾಪೀಡಯೋಜನ (ಉಚಿತವಾದ ಸ್ಥಳಗಳಲ್ಲಿ ಶಿರೋಭೂಷಣವಾಗಿ ಶೇಖರಕ ಮತ್ತು ಆಪೀಡಕ ಎಂಬೆರಡು ರೀತಿಯ ಆಭರಣಗಳನ್ನು ಧರಿಸುವುದು, ನೇಪಥ್ಯ ಪ್ರಯೋಗ (ತಾನು ವಸ್ತ್ರಾಲಂಕಾರ ಮಾಡಿಕೊಳ್ಳುವುದು, ಅಥವಾ ಇತರರಿಗೆ ಮಾಡುವುದು), ಕರ್ಣಪತ್ರ ಭಂಗ (ದಂತ ಮೊದಲಾದುವುಗಳಿಂದ ಕರ್ಣಾಭರಣಗಳನ್ನು ಮಾಡುವುದು), ಗಂಧಯುಕ್ತಿ (ಪರಿಮಳ ದ್ರವ್ಯಗಳ ತಯಾರಿಕೆ), ಭೂಷಣ ಯೋಜನ (ಆಭರಣಗಳನ್ನು ಮಾಡುವುದು), ಐಂದ್ರಜಾಲಾಯೋಗ (ಇಂದ್ರಜಾಲದ ವಿಧಾನಗಳು ಎಂದರೆ ಭ್ರಮಾಸೃಷ್ಟಿಯನ್ನು ನಿರ್ಮಿಸುವುದು). ದೇವತೆಗಳು, ಸರ್ಪಗಳು, ಸೈನ್ಯಗಳು ಇತ್ಯಾದಿ ಕೌಚುಮಾರಯೋಗ (ದೃಢದೇಹಿಯೂ ವೀರ್ಯವಂತನೂ ಆಗಲು ಸಾಧ್ಯವಾಗುವಂತಹ ಕುಚಮಾರನ ಚಿಕಿತ್ಸಾನಿರ್ದೇಶನ), ಹಸ್ತಲಾಘವ (ಎಲ್ಲ ಕೆಲಸಗಳಲ್ಲಿಯೂ ಕೈಗಳ ಎಂದರೆ ಹಸ್ತಗಳ ಚುರುಕು; ವ್ಯಕ್ತಿಗಳ ಎದುರಿನಲ್ಲಿಯೇ ಪದಾರ್ಥಗಳನ್ನು ಕದಿಯುವುದು' ಎಂದೂ ಅರ್ಥೈಸಿದ್ದಾರೆ), 'ವಿಚಿತ್ರ ಶಾಕಯೂಷ ಭಕ್ಷ್ಯವಿಕಾರ ಕ್ರಿಯಾ (ಬಗೆ ಬಗೆಯ ಕಾಯಿಪಲ್ಯದ ತಯಾರಿಕೆಯನ್ನೂ ಸಾರು ಹುಳಿ ಇತ್ಯಾದಿಗಳನ್ನೂ ಭಕ್ಷ್ಯಗಳನ್ನೂ ತಯಾರಿಸುವುದು), ಪಾನಕರಸರಾಗಾಸವಯೋಜನ (ಪಾನಕ ರಸ ಮೊದಲಾದ ಬಗೆಬಗೆಯ ಪೇಯಗಳನ್ನು ಸಿದ್ಧ ಮಾಡುವುದು), ಸೂಚಿವಾನ ಕರ್ಮಗಳು (ಹೊಲಿಯುವುದು, ನೇಯುವುದು, ಕಸೂತಿ ಹಾಕುವುದು ಮಡಿಕೆ ಮಾಡುವುದು), ಸೂತ್ರ ಕ್ರೀಡಾ (ದಾರಗಳಿಂದ ಆಡುವುದು, ಎಂದರೆ ಬೆರಳುಗಳಲ್ಲಿ ದಾರವೊಂದನ್ನು ಹಿಡಿದು ಅದರಿಂದ ಮನೆ, ದೇವಾಲಯ ಇತ್ಯಾದಿ ಸ್ಥೂಲ ರೇಖಾಕೃತಿಗಳನ್ನು ರಚಿಸುವುದು. 'ದಾರಗಳನ್ನೆಳೆಯುವುದರಿಂದ ಆಕೃತಿಗಳು ಚಲಿಸುವಂತೆ ಮಾಡುವುದು' ಎಂದೂ ಅರ್ಥೈಸಿದ್ದಾರೆ),

ವೀಣಾಡಮರುಕ ವಾದ್ಯಗಳು(ವೀಣೆ, ಡಮರುಗ ಮೊದಲಾದ ವಾದ್ಯಗಳನ್ನು ನುಡಿಸುವುದು), ಪ್ರಹೇಲಿಕಾ (ಒಗಟುಗಳು), ಪ್ರತಿಮಾಲಾ (ಒಂದು ಆಟ: ಒಬ್ಬನು ಒಂದು ಶ್ಲೋಕವನ್ನು ಹೇಳುತ್ತಾನೆ. ಇನ್ನೊಬ್ಬನು ಅದರ ಅಂತ್ಯಾಕ್ಷರದಿಂದ ಮೊದಲು ಮಾಡಿ ಇನ್ನೊಂದು ಶ್ಲೋಕವನ್ನು ಹೇಳುತ್ತಾನೆ ಹೀಗೆಯೇ ಮುಂದುವರಿಯುತ್ತದೆ. ಇದನ್ನು 'ಅಂತ್ಯಾಕ್ಷರಿ' ಎನ್ನುತ್ತಾರೆ), ದುರ್ವಾಚಕಯೋಗ (ಇನ್ನೊಂದು ಆಟ: ಪ್ರತಿಯೊಬ್ಬ ಸ್ಪರ್ಧಿಯೂ ಪರುಷಾಕ್ಷರಘಟಿತವಾದ ಶ್ಲೋಕಗಳನ್ನು ಹೇಳುವುದು), ಪುಸ್ತಕವಾಚನ (ಪುಸ್ತಕಗಳನ್ನು ಓದುವುದು, ನಾಟಕಾಖ್ಯಾಯಿಕಾದರ್ಶನ (ನಾಟಕಗಳ ಮತ್ತು ಆಖ್ಯಾಯಿಕೆಗಳ ಜ್ಞಾನ), ಕಾವ್ಯಸಮಸ್ಯಾ ಪೂರಣ (ಕವಿತೆಯ ರಚನೆ: ಶ್ಲೋಕದ ಕೊನೆಯ ಪಾದವು ಮೊದಲೇ ಕೊಡಲಾಗಿದ್ದು, ಅದರ ಮೊದಲ ಮೂರು ಪಾದಗಳನ್ನು - ನಾಲ್ಕು ಪಾದಗಳೂ ಕೂಡಿ ಸಮಂಜಸ ಅರ್ಥ ಬರುವಂತೆ - ಆಮೇಲೆ ಸೇರಿಸುವುದು), ಪಟ್ಟಿಕಾವೇತ್ರ ವಾನವಿಕಲ್ಪ (ಬೆತ್ತ ಮತ್ತು ಬಿದಿರುಗಳಿಂದ ಮಂಚಗಳು, ಆಸನಗಳು ಮುಂತಾದ ಬೇರೆ ಬೇರೆ ವಸ್ತುಗಳನ್ನು ಮಾಡುವುದು, ತಕ್ಷ ಕರ್ಮಗಳು (ಕೆತ್ತನೆ ಕೆಲಸ ಎಂದರೆ ಚಿನ್ನ, ಉಕ್ಕು, ಮರ ಮೊದಲಾದವುಗಳಲ್ಲಿ ಕೆಲಸ ಮಾಡುವುದು), ತಕ್ಷ (ಮರಗೆಲಸ), ವಾಸ್ತುವಿದ್ಯಾ, (ಗೃಹನಿರ್ಮಾಣ ವಿಜ್ಞಾನ), ರೂಪ್ಯರತ್ನ ಪರೀಕ್ಷಾ, (ನಾಣ್ಯಗಳು ಮತ್ತು ರತ್ನಗಳ ಪರೀಕ್ಷೆ), ಧಾತುವಾದ (ಖನಿಜಗಳ ಮಿಶ್ರಣ, ಶುದ್ಧೀಕರಣ ಇತ್ಯಾದಿ) ಮಣಿರಾಗಾಕರಜ್ಞಾನ (ಹರಳುಗಳು ಮತ್ತು ರತ್ನಗಳಿಗೆ ಬಣ್ಣ ಹಾಕುವ ವಿಧಾನಗಳ ತಿಳಿವಳಿಕೆ ಮತ್ತು ಗಣಿಗಳ ಸ್ಥಲಪರಿಜ್ಞಾನ ಮತ್ತು ಕಾರ್ಯ ಪರಿಜ್ಞಾನ), ವೃಕ್ಷಾಯುರ್ವೇದಯೋಗ (ಸಸ್ಯಗಳಿಗೆ, ಮರಗಳಿಗೆ ರೋಗವಿಲ್ಲದೆ ಸೊಂಪಾಗಿರುವಂತೆಯೂ, ವಿಶೇಷವಾಗಿ ಅವನ್ನು ಚಿಕ್ಕದು ಅಥವಾ ಎತ್ತರವಾಗಿ ಮಾಡಲು ಸಾಧ್ಯವಾಗುವಂತೆಯೂ, ಔಷಧಗಳನ್ನು ಬಳಸುವುದು ಮುಂತಾದ ವಿಧಾನಗಳ ತಿಳಿವಳಿಕೆ), ಮೇಷ ಕುಕ್ಕಟ ಲಾವಕ ಯುದ್ಧವಿಧಿ (ಟಗರು, ಹುಂಜ ಮತ್ತು ಲಾವಗೆಗಳು ಯುದ್ಧ ಮಾಡುವಂತೆ ಮಾಡುವುದು), ಶುಕಸಾರಿಕಾ ಪ್ರಲಾಪನ (ಗಂಡು ಹೆಣ್ಣುಗಿಳಿಗಳು ಮಾತುಗಳನ್ನು ಆಡುವಂತೆ ಕಲಿಸುವುದು), ಉತ್ಸಾದನ - ಸಂವಾಹನ - ಕೇಶಮರ್ದನದಲ್ಲಿ ಕೌಶಲ (ಹಸ್ತಪಾದಗಳಿಂದ ತಲೆ ಮತ್ತು ಶರೀರವನ್ನು ತಿಕ್ಕುವ ಎಂದರೆ ಮರ್ದಿಸುವ ಕೌಶಲ), ಅಕ್ಷರ (ಮುಷ್ಟಿಕಾಕಥನ ಅಕ್ಷರ ಶ್ರೇಣಿಗಳಿಂದ ಅರ್ಥವನ್ನರಿಯುವುದು: ಉದಾ: 'ಮೇವೃಮಿಕಸಿಂಕತು ವೃಧಮಕುಂಮಿ' ಎಂಬ ಅಕ್ಷರ ಶ್ರೇಣಿಯು ಮೇಷಾದಿ ದ್ವಾದಶ ರಾಶಿಗಳನ್ನು ಸೂಚಿಸುತ್ತದೆ), ಮ್ಲೇಚ್ಛಿತ ವಿಕಲ್ಪ (ಗೂಢಲಿಪಿ ಭಾಷಾ ಭೇದಗಳು ಎಂದರೆ ಉದ್ದಿಷ್ಟ ವ್ಯಕ್ತಿಗಲ್ಲದೆ ಬೇರೆ ಯಾರಿಗೂ ತಿಳಿಯಲಾಗದ ಭಾಷೆಗಳು), ದೇಶಭಾಷಾ ವಿಜ್ಞಾನ (ನಿಖಿಲ ದೇಶೀಯ ಭಾಷಾಪಾಂಡಿತ್ಯ), ಪುಷ್ಪ ಶಕಟಿಕಾ (ಪುಷ್ಪಗಳ ಗಾಡಿ, ಎಂದರೆ ಪ್ರೇಮಪತ್ರಗಳನ್ನಿಟ್ಟು ಕಳುಹಿಸಲು ಹೂಗಳಿಂದ ಗಾಡಿಗಳು, ಕುದುರೆಗಳು, ಆನೆಗಳು ಪಲ್ಲಕ್ಕಿಗಳು ಇತ್ಯಾದಿಗಳನ್ನು ಮಾಡುವುದು), ನಿಮಿತ್ತಜ್ಞಾನ (ಶುಭ ಮತ್ತು ಅಶುಭ ಶಕುನಗಳ ಜ್ಞಾನ), ಯಂತ್ರ ಮಾತೃಕಾ (ಸಂಚಾರ ಕಾರ್ಯಕ್ಕಾಗಿ, ಜಲ ಮತ್ತು ಯುದ್ಧೋದ್ಯೋಗಗಳಿಗಾಗಿ ಯಂತ್ರ ನಿರ್ಮಾಣ ಮಾಡುವುದು), ಧಾರಣ

ಮಾತೃಕಾ (ವಿಷಯಗಳನ್ನು ನೆನಪಿಟ್ಟುಕೊಳ್ಳುವುದು, 'ಕೈಗಳಲ್ಲಿ ವಸ್ತ್ರ ಮತ್ತು ಇತರ ಪದಾರ್ಥಗಳನ್ನು ಹಿಡಿದುಕೊಳ್ಳುವುದು ಎಂದು ಅರ್ಥೈಸಿದ್ದಾರೆ), ಸಂಪಾಠ್ಯ (ಒಂದು ಆಟ : ಒಬ್ಬನು ಒಂದು ಶ್ಲೋಕವನ್ನು ಹೇಳುತ್ತಾನೆ. ಅದನ್ನು ಮತ್ತೊಬ್ಬನು ತನಗೆ ಅಪರಿಚಿತವಾಗಿದ್ದರೂ ಮತ್ತೊಮ್ಮೆ ಯಥಾರೀತಿ ಹೇಳಿ ಒಪ್ಪಿಸಬೇಕು), ಮಾನಸೀ (ಒಂದು ಆಟ: ಅನುಸ್ವಾರ ವಿಸರ್ಗಗಳನ್ನು ಯಥಾವತ್ತಾಗಿ ಬರೆದು, ಉಳಿದ ಅಕ್ಷರಗಳೆಡೆಯಲ್ಲಿ ಕೇವಲ ಅವುಗಳ ತಲೆಕಟ್ಟು ಕೊಂಬು ಇತ್ಯಾದಿ ಚಿಹ್ನೆಗಳನ್ನು ತೋರಿಸಿ ಒಬ್ಬನು ಒಂದು ಶ್ಲೋಕವನ್ನು ಬರೆಯುತ್ತಾನೆ. ಇನ್ನೊಬ್ಬ ಆಟಗಾರ ಆ ಚಿಹ್ನೆಗಳಿರುವೆಡೆಯಲ್ಲಿ ಉಚಿತವಾದ ಅಕ್ಷರಗಳನ್ನು ಪೂರ್ತಿಯಾಗಿ ಬರೆಯಬೇಕು), ಕಾವ್ಯಕ್ರಿಯಾ (ಕಾವ್ಯ ರಚನೆ) ಅಭಿದಾನಕೋಶ, ಛಂದೋವಿಜ್ಞಾನ (ಶಬ್ದಕೋಶ ಮತ್ತು ಛಂದಶ್ಶಾಸ್ತ್ರಗಳ ಜ್ಞಾನ), ಕ್ರಿಯಾಕಲ್ಪ (ಕಾವ್ಯ ಮತ್ತು ಅಲಂಕಾರ), ಛಲಿತಕ ಯೋಗಗಳು (ವಂಚನೆಯ ವಿಧಾನ ಎಂದರೆ ವ್ಯಕ್ತಿಯ ಆಕೃತಿ ಮತ್ತು ಸ್ವರವನ್ನು ಗುರುತುಹಿಡಿಯಲಾಗದಂತೆ, ಅಥವಾ ಗುರುತಿಸಲಾಗದೆ ಮತ್ತೊಬ್ಬನ ಕಡೆಗೆ ಮುಂದುವರಿಯುವಂತೆ ಮರೆ ಮಾಡುವುದು), ವಸ್ತುಗೋಪನ(ವಸ್ತುಗಳನ್ನು ತೊಡುವುದರಲ್ಲಿ ಭ್ರಮೋತ್ಪಾದನೆ; ತುಂಡು ಬಟ್ಟೆಯನ್ನು ತೊಟ್ಟರೂ ತುಂಡು ಬಟ್ಟೆಯೆಂದು ಕಾಣದಂತೆ ಮಾಡುವುದು ಇತ್ಯಾದಿ), ದ್ಯೂತ ವಿಶೇಷ (ಜೂಜಿನ ಹಲವು ವಿಧಗಳು: ದುರೋದರಾದಿ ಕಪಟಕಲಾ ಪ್ರೌಢತ್ವ), ಆಕರ್ಷ ಕ್ರೀಡಾ (ಪಗಡೆಯಿಂದಾಡುವ ಒಂದು ಜೂಜು), ಬಾಲಕ್ರೀಡೆಗಳು (ಮಕ್ಕಳಿಗಾಗಿ ಆಟಗಳು), ಚೆಂಡುಗಳು, ಗೊಂಬೆಗಳು ಇತ್ಯಾದಿಗಳ ಆಟ, ವೈನಯಿಕೀಯ ವಿದ್ಯೆಗಳ ಜ್ಞಾನ (ವ್ಯಕ್ತಿಯನ್ನು ವಿದ್ಯಾವಂತನನ್ನಾಗಿ ಮಾಡುವ ವಿಜ್ಞಾನ ವಿಷಯಗಳ ಮತ್ತು ಕಲೆಗಳ ತಿಳಿವಳಿಕೆ), ವೈಜಯಿಕೀಯ ವಿದ್ಯೆಗಳ ಜ್ಞಾನ (ಜಯವನ್ನು ಗಳಿಸಿಕೊಡುವ ವಿದ್ಯೆಗಳ ತಿಳಿವಳಿಕೆ), ವ್ಯಾಯಾಮಿಕೀಯ ವಿದ್ಯೆಗಳ ಜ್ಞಾನ (ವ್ಯಾಯಾಮ ಅಥವಾ ಅಂಗಸಾಧನೆಯ ವಿದ್ಯೆಗಳ ತಿಳಿವಳಿಕೆ) - ಈ ಅರವತ್ತನಾಲ್ಕು ವಿದ್ಯೆಗಳು. ಈಗ ಇವುಗಳನ್ನು ಕಲೆಗಳೆಂದು ಒಪ್ಪಲು ಕಷ್ಟವೆನಿಸುತ್ತದೆಯಲ್ಲವೆ? ನಮ್ಮಲ್ಲಿ ಮಾತ್ರವಲ್ಲ, ಉಳಿದ ದೇಶಗಳಲ್ಲೂ ಕಲೆಯನ್ನು ಕುರಿತ ಅಭಿಪ್ರಾಯಗಳು ಈ ಬಗೆಯದೇ ಆಗಿದ್ದವು. ಗ್ರೀಕ್ ದಾರ್ಶನಿಕ ಪ್ಲೇಟೋ, ಚಿತ್ರಕಲೆ ಮತ್ತು ಶಿಲ್ಪಗಳನ್ನು ಕಲೆಗಳೆಂದು ಗುರುತಿಸುವುದರ ಜೊತೆಗೆ ಬೇಟೆಯಾಡುವುದು, ಸೂಲಗಿತ್ತಿತನ, ಭವಿಷ್ಯ ಹೇಳುವುದು, ಗಣಿತಶಾಸ್ತ್ರಗಳನ್ನೂ ಕಲೆಯೊಂದಿಗೆ ಸೇರಿಸಿದ್ದ. ಕ್ರಮೇಣ ಹದಿನಾಲ್ಕು ಹಾಗೂ ಹದಿನೈದನೆಯ ಶತಮಾನಗಳಲ್ಲಿ ಯುರೋಪಿನ ಪುನರುಜ್ಜೀವನ ಕಾಲದಲ್ಲಿ ಈ ಧೋರಣೆ ಬದಲಾಗತೊಡಗಿತು.

ಹಾಗಿದ್ದರೂ ನಾವು ಇಂದು ಕಲೆಯೆಂದು ಕರೆಯಲ್ಪಡುವುದು ಅಸ್ತಿತ್ವಕ್ಕೆ ಬಂದಿದ್ದು ಹದಿನೆಂಟನೆಯ ಶತಮಾನದಲ್ಲಿ ಯುರೋಪಿನ ಸಾಮ್ರಾಜ್ಯಗಳು ಕುಸಿಯ ತೊಡಗಿದಾಗ. ಹದಿನೆಂಟನೆಯ ಶತಮಾನಕ್ಕೂ ಮೊದಲು ಕಲೆಯನ್ನು ನಿಯಂತ್ರಿಸುತ್ತಿದ್ದ ಸಂಗತಿಗಳೇ ಬೇರೆ. ವ್ಯಕ್ತಿಗೆ ಪ್ರಾಧಾನ್ಯ ನೀಡುವ ವ್ಯಕ್ತಿತ್ವವಾದದ ಯುಗವು ಕಲೆಯ ಧೋರಣೆಯನ್ನೇ ಬದಲಾಯಿಸಿತು. ಕಳೆದ ಸುಮಾರು 200 ವರ್ಷಗಳಿಗೆ ಮೊದಲು 'ಇದು ಕಲೆಯಲ್ಲ'

ಎಂದು ಭಾವಿಸಿದ್ದ ಅನೇಕ ಪ್ರಕಾರಗಳು ಕಲೆಯ ವ್ಯಾಪ್ತಿಗೆ ಬಂದಿವೆ. ನಮ್ಮ ಆದಿಮ, ಗ್ರಾಮ್ಯ ಶಿಲ್ಪಗಳನ್ನು ಹಿಂದೆಂದೂ ಗಂಭೀರ ಕಲೆಯಾಗಿ ಪರಿಗಣಿಸಿರಲಿಲ್ಲ. ಶಾಸ್ತ್ರ ಸಮ್ಮತವಾಗಿ ರಚಿಸಿದ ಸಂಪ್ರದಾಯ ಶಿಲ್ಪಗಳು ಮಾತ್ರವೇ ಕಲೆ. ಹಳ್ಳಿಗಳಲ್ಲಿರುವ ಮಾರಿ, ದುರುಗಮ್ಮ, ಗಡಿಮಾರಿ ಇತ್ಯಾದಿ ಶಿಲ್ಪಗಳು ಒರಟಾಗಿರುವುದರಿಂದ, ಶಾಸ್ತ್ರಬದ್ಧವಲ್ಲದ್ದರಿಂದ ಅವು ಕಲೆಯಲ್ಲ. ಅವು ಕಲೆಗೊತ್ತಿಲ್ಲದ ಅಜ್ಞರ ನಿರ್ಮಾಣಗಳು ಎಂದು ಇವುಗಳನ್ನು ತಿರಸ್ಕರಿಸಲಾಗುತ್ತಿತ್ತು. ನಮ್ಮಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ ಇದೇ ಧೋರಣೆಯಿತ್ತು. ಉದಾಹರಣೆಗೆ ಹೇಳುವುದಾದರೆ ಆಫ್ರಿಕನ್ ಶಿಲ್ಪಗಳನ್ನು ಕಲಾ ಇತಿಹಾಸಕಾರರು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಈ ಶತಮಾನದ ಆರಂಭದಲ್ಲಿ ಕಲೆಯ ಧೋರಣೆಯೇ ಬದಲಾದ ಮೇಲೆ ಈ ಆದಿಮ ಶಿಲ್ಪಗಳಲ್ಲಿ ಇರುವ ಸತ್ವ, ಶಕ್ತಿಗಳನ್ನು ಗಮನಿಸಿ ಅವುಗಳನ್ನು ಕುರಿತು ಹಲವಾರು ಕಲಾವಿದರು ಆಸಕ್ತಿ ವಹಿಸಿದರು. ಹಲವು ಸಾವಿರ ವರ್ಷಗಳ ಹಿಂದಿನ ವಿಲೆಂಡಾರ್ಫಿನ ವೀನಸ್ ಶಿಲ್ಪದ ಬಗ್ಗೆಯೂ ಇದೇ ಮಾತು ಹೇಳಬಹುದು. ಇಂದು ಕಲಾ ಇತಿಹಾಸಕಾರರು ಇತಿಹಾಸದ ಕುರಿತು ಹೇಳುವಾಗ ಈ ವೀನಸ್ ಶಿಲ್ಪವನ್ನು ಉಲ್ಲೇಖಿಸದೇ ಇರುವುದು ವಿರಳ. ಹೀಗೆ ಇದು ತನ್ನ ಸ್ವಾಭಾವಿಕ ಕಲಾತ್ಮಕತೆಯಿಂದ ಶಕ್ತವಾಗಿದೆ; ಪ್ರಖ್ಯಾತವಾಗಿದೆ. ಅಷ್ಟೇಕೆ, ಇಂದು ಗಂಭೀರ ಆಧುನಿಕ ಕಲಾ ಚಳವಳಿಗಳೆಂದು ಕರೆಸಿಕೊಳ್ಳುವ ಎಕ್ಸ್‌ಪ್ರೆಶನಿಸಂ, ಫಾವಿಸಂ, ಕ್ಯೂಬಿಸಂ ಮುಂತಾದವುಗಳಿಗೆ ಪ್ರೇರಣೆ ನೀಡಿದ್ದು ಈ ಕಲೆಗಳೇ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇಂದಿಗೂ ನಮ್ಮ ಹಲವರಲ್ಲಿ ನಮ್ಮ ಸುತ್ತಲಿನ ಶಾಸ್ತ್ರೀಯವಲ್ಲದ ಕಲಾ ಸೃಷ್ಟಿಯ ಬಗೆಗೆ ತಿರಸ್ಕಾರವಿದೆ. ಆದರೆ ಬಹುತೇಕ ಅವುಗಳಲ್ಲೇ ನಿಜವಾದ ಕಲೆಯ ಸತ್ವವಿರುತ್ತದೆ. ಕೆಲವು ವರ್ಷಗಳ ಹಿಂದೆ ಬ್ರಿಟನ್ನಿನಲ್ಲಿ ದಕ್ಷಿಣ ಭಾರತದ ಮರದ ಶಿಲ್ಪಗಳ ಪ್ರದರ್ಶನವೊಂದು ನಡೆಯಿತು. ಅದನ್ನು ಕುರಿತಂತೆ ಇಂಗ್ಲೆಂಡಿನ ಕಲಾ ಇತಿಹಾಸಕಾರರೊಬ್ಬರು ಬೆಂಗಳೂರಿನಲ್ಲಿ ಈಚೆಗೆ ಸ್ಲೈಡುಗಳ ಪ್ರದರ್ಶನ ನಡೆಸಿದರು. ಹಾಗೆ ಅವರು ತೋರಿಸುತ್ತಿದ್ದಾಗ ಅಲ್ಲಿನ ಮರದ ಶಿಲ್ಪವೊಂದರ ಬಗ್ಗೆ ಹೇಳುತ್ತ ಅದರ ಕಲಾತ್ಮಕ ಗುಣಗಳನ್ನು ವಿವರಿಸಿದರು. ಆ ಶಿಲ್ಪ ನಮ್ಮ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಭಾಗದಲ್ಲಿ ಹಳ್ಳಿಗಳವರು ನಿರ್ಮಿಸುವ 'ಗಡಿಮಾರಿ'ಯಾಗಿತ್ತು. ಹಳ್ಳಿಗಳವರು ಒರಟಾಗಿ, ವಿರೂಪದಿಂದ ಸೃಷ್ಟಿಸುವ ಇವುಗಳಲ್ಲಿ ಅಲ್ಲಿನ ಜನರೂ ಗಂಭೀರ ಕಲೆಯನ್ನು ಕಾಣುವುದಿಲ್ಲ. ಅದನ್ನು ಕಲೆಯ ದೃಷ್ಟಿಯಿಂದ ತಿರಸ್ಕರಿಸುವುದುಂಟು. ಆದರೆ ಅವುಗಳಲ್ಲೂ ಕಲಾಸತ್ವ ಇರುತ್ತದೆ ಎಂಬುದನ್ನು ನಾವು ಅರಿಯಬೇಕು. ನಮ್ಮ ಸುತ್ತಲಿನ ಹಳ್ಳಿಗಳಲ್ಲೂ ಈ ರೀತಿಯ ಸತ್ವವುಳ್ಳ ಶಿಲ್ಪಗಳು, ಕಲಾಕೃತಿಗಳು ಇರಬಹುದೆನ್ನುವುದನ್ನು ತಿಳಿಯಬೇಕು.

ದೃಶ್ಯಕಲೆ ಎಂದರೇನು? ಎನ್ನುವ ಬಗ್ಗೆ ಹಲವಾರು ಶತಮಾನಗಳಿಂದ ಚರ್ಚೆ ನಡೆಯುತ್ತಿದೆಯಾದರೂ ಈವರೆಗೆ ಸಮರ್ಪಕವಾದ, ಸರ್ವಸಮ್ಮತವಾದ ಉತ್ತರ ಸಿಕ್ಕಿಲ್ಲ.

ಈ ಹಿನ್ನೆಲೆಯಲ್ಲಿ ಕಲೆ ಎಂದರೇನು? ಎನ್ನುವ ಬಗ್ಗೆ ಕೆಲವು ಅಭಿಪ್ರಾಯಗಳನ್ನು ನೋಡೋಣ.

ವಾತ್ಸಾಯನನ ಕಾಮಸೂತ್ರಕ್ಕೆ ಟೀಕೆಯನ್ನು ಬರೆದ ಯಶೋಧರ ಪಂಡಿತನು ಒಂದು ಶ್ಲೋಕದ ಮೂಲಕ ಚಿತ್ರಕಲೆಯಲ್ಲಿರಬೇಕಾದ ಷಡಂಗಗಳು ಅಂದರೆ ಆರು ಅಂಗಗಳನ್ನು ಹೀಗೆ ಹೇಳಿದ್ದಾನೆ.

ರೂಪ ಭೇದಾ: ಪ್ರಮಾಣಾನಿ ಭಾವ ಲಾವಣ್ಯಯೋಜನಮ್:
ಸಾದೃಶ್ಯಂ ವರ್ಣಿಕಾಭಂಗಂ ಇತಿ ಚಿತ್ರ ಷಡಂಗಕಮ್॥

ಇದರಲ್ಲಿ ರೂಪಭೇದಃ ಜೀವ, ನಿರ್ಜೀವ ವಸ್ತುಗಳಲ್ಲಿನ ವ್ಯತ್ಯಾಸ; ಪ್ರಮಾಣಃ ಅಂಗಾಂಗಳ ಪ್ರಮಾಣ, ತಾಳಮಾನ; ಭಾವ: ಅಭಿವ್ಯಕ್ತಿಗೊಳಿಸುವ ರಸಭಾವ; ಲಾವಣ್ಯ ಯೋಜನೆ: ಸೌಂದರ್ಯ ಯೋಜನೆ; ಸಾದೃಶ್ಯ: ಆಂತರಿಕ ಮತ್ತು ಪ್ರಾತಿನಿಧಿಕ ಅಂಶಗಳ ಹೋಲಿಕೆ; ವರ್ಣಿಕಾಭಂಗ: ವರ್ಣ ಸಂಯೋಜನೆ, ವರ್ಣ ವಿನ್ಯಾಸ, ಈ ಆರು ಅಂಗಗಳಿಂದ ಕಲೆಯು ಕೂಡಿರಬೇಕೆಂದು ಹೇಳುತ್ತಾನೆ.


ಪ್ಲೇಟೋವಿನ ಶಿಷ್ಯ ಅರಿಸ್ಟಾಟಲ್ (ಕ್ರಿ.ಪೂ.384)ಕಲೆ ಮತ್ತು ಕಲಾವಿದರ ಬಗ್ಗೆ ಹಲವಾರು ವಿಚಾರಗಳನ್ನು ತಿಳಿಸಿದ. 'ಸೃಷ್ಟಿ ಸೌಂದರ್ಯಕ್ಕೆ ಪೂರಕವಾಗುವ ಅಥವಾ ಅದರ ಸೌಂದರ್ಯಾನುಭೂತಿಗೆ ಹತ್ತಿರವಾಗುವ ಮಾನವ ನಿರ್ಮಿತ ಕಲಾಸೃಷ್ಟಿಯನ್ನು ಗ್ರಾಹ್ಯ ಮಾಡಬಹುದೆಂದು ಹೇಳಿದ "ಆದರೆ ಕೆಳದರ್ಜೆಯ ವಸ್ತುಗಳು ಉತ್ತಮವಾದುದನ್ನು ಅನುಕರಣೆ ಮಾಡಿದರೆ, ಅಥವಾ ಆ ಉತ್ತಮವಾದುದರ ಗುಣವಿಶೇಷಣವನ್ನು ತನ್ನಲ್ಲಿಯೇ ಪ್ರತಿಬಿಂಬಿಸಿದರೆ ಅದು ಕಲಾಕೃತಿಯಾಗುತ್ತದೆ." ಅಂದರೆ ಕಲಾಕೃತಿಗಳೆಲ್ಲ ದೈವ ಸೃಷ್ಟಿಯ ಅನುಕರಣವೆಂದು ಕರೆದು, ಮೂಲವಸ್ತು ಇರುವಂತೆಯೇ ಅಥವಾ ಅದಕ್ಕಿಂತ ಹೆಚ್ಚಿನ ಚೆಲುವಿನಲ್ಲಿ ಇಲ್ಲವೆ ಕಡಿಮೆ ಚೆಲುವಿನಿಂದ ರಚಿಸಬಹುದೆಂಬ ಈ ಸಿದ್ಧಾಂತವನ್ನು ಆನಂತರದವರು ಇನ್ನಷ್ಟು ವಿಸ್ತಾರವಾಗಿ ಪ್ರತಿಪಾದಿಸಿದರು.

ಟಾಲ್‌ಸ್ಟಾಯ್ ಅವರ ಪ್ರಕಾರ "ಅನುಭವಿಸಿ ಆಗಿರುವ ಭಾವವನ್ನು ಒಬ್ಬಾತ ತನ್ನಲ್ಲಿ ಎಚ್ಚರಿಸಿಕೊಂಡು ಅದನ್ನು ಚಲನೆ, ರೇಖೆ, ಬಣ್ಣ, ನಾದ, ಆಕೃತಿ ಅಥವಾ ಶಬ್ದಗಳ ಮೂಲಕ ಅಭಿವ್ಯಕ್ತಿಗೊಳಿಸಿ, ಆ ಭಾವವನ್ನು ಇನ್ನೊಬ್ಬನೆಡೆಗೆ ಪ್ರವಹಿಸಿದಾಗ ಎರಡನೆಯವನಲ್ಲೂ ಮೂಲದ ಭಾವನೆ ಸ್ಫುರಿಸುವಂತೆ ಮಾಡುವುದೇ ಕಲೆಯ ಕೆಲಸ". ಸೌಂದರ್ಯ ಶಾಸ್ತ್ರಜ್ಞ ಇಮ್ಯಾನುಯಲ್ ಕ್ಯಾಂಟ್ ಅವರ ಪ್ರಕಾರ "ಯಾವುದು ತಾಟಸ್ಥ್ಯ ಚಿಂತನೆಯಲ್ಲಿ ಆನಂದವನ್ನು ಕೊಡಬಲ್ಲದೋ ಅದೇ ಕಲೆ. ತಾಟಸ್ಥ್ಯವು ಶುದ್ಧವಾದ ಚಿಂತನೆಯಾಗಿದ್ದು ಅದಕ್ಕೆ ವಸ್ತುವಿನ ಇರುವಿಕೆಯ ಅವಶ್ಯಕತೆಯಿಲ್ಲ. ವಸ್ತುವಿನ ಅಸ್ತಿತ್ವದ ಮೇಲಿರುವ ಆಸಕ್ತಿಯಿಂದಾಗಿ ಆ ವಸ್ತು ಒಳ್ಳೆಯದು, ಹಿತಕಾರಿ ಎಂಬ ಗುಣಗಳೂ ಸೇರಿರುತ್ತವೆ. ಆದರೆ ಯಾವುದು ಸುಂದರವಾಗಿದೆಯೋ ಅದು ಈ ಬಗೆಯ ಎಲ್ಲ ಆಸಕ್ತಿಗಳಿಂದ ಸ್ವತಂತ್ರವಾಗಿರುತ್ತದೆ". ಇನ್ನೊಬ್ಬ ಸೌಂದರ್ಯ ಶಾಸ್ತ್ರಜ್ಞ ಕ್ರೋಷೆ "ಕಲೆ


ಎಂದರೆ ತಟಸ್ಥ ಅವಲೋಕನವೂ ಅಲ್ಲ, ಹಗಲುಗನಸು ಕಾಣುವುದೂ ಅಲ್ಲ. ಅದು ವ್ಯವಸ್ಥಾಪಿಸಲ್ಪಟ್ಟ ಪ್ರತಿಮೆಗಳ ಮೂಲಕ ಉಂಟಾಗುವ ಮಾನಸಿಕ ದೃಶ್ಯ" ಎನ್ನುತ್ತಾನೆ.

ಒಂದು ನಿಶ್ಚಿತ ಸಂದೇಶವನ್ನು ಸಮೃದ್ಧಗೊಳಿಸಲು, ವಸ್ತುವಿನ ಗುಣಗಳನ್ನು ಹೆಚ್ಚಿಸಲು ಅಥವಾ ನೋಡುಗನಲ್ಲಿ ಗುಣಾತ್ಮಕವಾದ ಹಾಗೂ ವಿಷಯದ ಜಾಗೃತಿಯನ್ನು ಉಂಟುಮಾಡುವ ದಿಸೆಯಲ್ಲಿ ಮಾನವನು ಉದ್ದೇಶಪೂರ್ವಕವಾಗಿ ಮಾಡಿದವುಗಳೇ ಕಲೆ ಎನ್ನುವ ಅಭಿಪ್ರಾಯವೂ ಉಂಟು.

ಒಂದು ಕಲಾಕೃತಿಯು ಸುಂದರವಾಗಿರಬೇಕಾದರೆ ಅದು ವಸ್ತುವಿನ ಪ್ರತಿರೂಪವಾಗಿರಬೇಕು ಎಂಬುದು ಬಹಳ ಹಳೆಯ ಸಿದ್ಧಾಂತ; ಪ್ರಾಚೀನ ಗ್ರೀಕ್ ಜನರು ಇದೇ ನಂಬಿಕೆಯುಳ್ಳವರಾಗಿದ್ದರು. ಅರಿಸ್ಟಾಟಲ್ ನಿಸರ್ಗವನ್ನು ಪ್ರತಿರೂಪಿಸುವುದು ಮನುಷ್ಯನ ಹುಟ್ಟುಗುಣವೆಂದೂ, ಈ ಗುಣವೇ ಅವನ ಚಿತ್ರಕಲೆಯಲ್ಲಿ ವ್ಯಕ್ತವಾಗುತ್ತದೆಂದೂ ಹೇಳುತ್ತಾನೆ. ಅಂದರೆ ಚಿತ್ರಕಲೆಯು ವಸ್ತುವಿನ ಪ್ರತಿರೂಪ ಎಂಬ ಸಿದ್ಧಾಂತಕ್ಕೆ ಮನುಷ್ಯನ ಸ್ವಭಾವವೂ ಒಗ್ಗಿಕೊಂಡಿದೆ ಎಂದು ಹೇಳಿದಂತಾಗುತ್ತದೆ. ಈ ಕುರಿತು ಗ್ರೀಸ್ ದೇಶದ ಒಂದು ಐತಿಹ್ಯವನ್ನು ಉಲ್ಲೇಖಿಸಬಹುದು. ಪುರಾತನ ಗ್ರೀಸ್ ದೇಶದಲ್ಲಿ ಇಬ್ಬರು ಚಿತ್ರಕಾರರಿದ್ದರು. ಅವರಲ್ಲೊಬ್ಬನಾದ ಜ್ಯೂಕ್ಸಿಸ್ ದ್ರಾಕ್ಷಿಯ ಗೊಂಚಲನ್ನು ತನ್ನ ಚಿತ್ರದಲ್ಲಿ ಯಥಾವತ್ ಚಿತ್ರಿಸುವ ಸಾಮರ್ಥ್ಯ ಹೊಂದಿದ್ದ. ಅವನ ಚಿತ್ರದಲ್ಲಿನ ದ್ರಾಕ್ಷಿಯನ್ನು ನೋಡಿ ಅದು ನಿಜವಾದ ದ್ರಾಕ್ಷಿಗಳೆಂದು ಭ್ರಮಿಸಿ ಹಕ್ಕಿಗಳು ಆ ಚಿತ್ರದ ಬಳಿ ಬಂದು ಕುಕ್ಕುತ್ತಿದ್ದವಂತೆ. ಇದರಿಂದ ತಾನೆ ಮೇಲೆಂಬ ಗರ್ವ ಜ್ಯೂಕ್ಸಿಸ್‌ನಲ್ಲಿತ್ತು. ಈ ವಿಷಯ ಇನ್ನೊಬ್ಬ ಕಲಾವಿದ ಪರೇಶಿಯಾಸ್‌ನಿಗೆ ತಿಳಿದು ಅವನು ಜ್ಯೂಕ್ಸಿಸ್‌ನನ್ನು ತನ್ನ ಮನೆಗೆ ಆಹ್ವಾನಿಸಿದ. ಅವನು ಬಂದಾಗ ಎದುರಿಗೆ ಕಾಣುತ್ತಿರುವ ಪರದೆಯೊಂದನ್ನು ಸರಿಸಿದರೆ ತನ್ನ ಹೊಸ ಚಿತ್ರ ನೋಡಬಹುದು ಎಂದನಂತೆ, ಅದರಂತೆ ಜ್ಯೂಕ್ಸಿಸ್ ಆ ಪರದೆಯನ್ನು ಪಕ್ಕಕ್ಕೆ ಸರಿಸಲು ಪ್ರಯತ್ನಿಸಿದನಾದರೂ ಅದು ಪಕ್ಕಕ್ಕೆ ಸರಿಯಲಿಲ್ಲ. ಏಕೆಂದರೆ ಆ ಪರದೆ ನಿಜವಾದುದಾಗಿರದೆ ಬರೆದ ಚಿತ್ರವಾಗಿತ್ತು. ಇದರಿಂದ ಜ್ಯೂಕ್ಸಿಸ್‌ನ ಗರ್ವ ಭಂಗವಾಯಿತು. ಜ್ಯೂಕ್ಸಿಸ್ ಹಕ್ಕಿಗಳಲ್ಲಿ ಮಾತ್ರ ಭ್ರಮೆಯುಂಟುಮಾಡಬಲ್ಲ ಕಲಾವಿದನಾಗಿದ್ದ. ಆದರೆ ಪರೇಶಿಯಾಸ್ ಮನುಷ್ಯರನ್ನು, ಅಷ್ಟೇಕೆ ಪ್ರತಿಭಾವಂತ ಕಲಾವಿದರನ್ನು ಭ್ರಾಂತಿಗೊಳಿಸಬಲ್ಲಂತಹ ಸಾಮರ್ಥ್ಯ ಉಳ್ಳವನಾಗಿದ್ದ. ಈ ಕಾರಣಕ್ಕಾಗಿ ಜ್ಯೂಕ್ಸಿಸ್‌ಗಿಂತ ಪರೇಶಿಯಾಸ್ ಒಳ್ಳೆಯ ಕಲಾವಿದನೆಂಬ ಮಾನ್ಯತೆ ಪಡೆದನಂತೆ. ನಮ್ಮಲ್ಲೂ ಇದೇ ರೀತಿಯ ಹಲವು ಅಜ್ಜಿ ಕಥೆಗಳನ್ನು ನಾವು ಆಗಾಗ ಕೇಳುತ್ತೇವೆ. ಆದರೆ ಆಧುನಿಕ ಕಲಾವಿದರು ಚಿತ್ರಕಲೆಯು ನಿಸರ್ಗದ ಕೇವಲ ಪ್ರತಿರೂಪವಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಚಿತ್ರಕಲಾವಿದರು ನಿಸರ್ಗದ ಯಾವುದೇ ವಸ್ತುಗಳನ್ನು ಅವು ಇರುವಂತೆಯೇ ಚಿತ್ರಿಸಬಯಸುವುದಿಲ್ಲ. ಬದಲಿಗೆ ಅಲ್ಲಿರುವುದರಲ್ಲಿ ತನಗೆ ಬೇಕಾದ ವಸ್ತುವನ್ನು ಆರಿಸಿ, ಆಕರ್ಷಕವಾದ ರೀತಿಯಲ್ಲಿ ಮತ್ತೆ ಜೋಡಿಸುತ್ತಾರೆ. ಹಲವೊಮ್ಮೆ



ಪಾಬ್ಲೊ ಪಿಕಾಸೋ



ಸೆಜಾನ್



ಮಹಿಷಮರ್ಧಿನಿ



ಚಿಕಣಿ ಚಿತ್ರ



ಹೆನ್ರಿ ಮತೀಸ್

ದೃಶ್ಯಕಲೆ ಎಂದರೇನು ?



ಕೆ. ಜಿ. ಸುಬ್ರಮಣ್ಯನ್



ಷಗಾಲ್

ವಸ್ತುವನ್ನು ಅದು ಇರುವುದಕ್ಕಿಂತಲೂ ಹೆಚ್ಚು ಆಕರ್ಷಕವಾಗಿ ಚಿತ್ರಿಸಬಹುದು. ಹೀಗೆ ಭೌತಿಕ ವಸ್ತುಗಳನ್ನು ಪ್ರತಿರೂಪಿಸುವುದು ಕಲೆಯ ಉದ್ದೇಶವಲ್ಲವೆಂದೂ, ಮನುಷ್ಯನ ಆಂತರಿಕ ಭಾವನೆಗಳನ್ನು ಆಕರ್ಷಣೆಯಿಂದ, ಆನಂದದಾಯಕವಾಗಿ ಅಭಿವ್ಯಕ್ತಿಸುವುದೇ ಅವರ ಉದ್ದೇಶ. ಕ್ಲೈವ್‌ಬೆಲ್ ಎಂಬ ಸೌಂದರ್ಯ ಶಾಸ್ತ್ರಜ್ಞನ ಪ್ರಕಾರ ಚಿತ್ರಕಲೆಯ ಸೌಂದರ್ಯ ಅದರ ವರ್ಣ, ರೇಖಾ ಸಂಯೋಜನೆಯಲ್ಲಡಗಿದೆಯೇ ಹೊರತು ಪ್ರತಿರೂಪಿತವಾಗಿರುವ ವಸ್ತುವಿನಲ್ಲಲ್ಲ. ಆದ್ದರಿಂದ ಚಿತ್ರಕಲೆಯ ಸೌಂದರ್ಯಕ್ಕೆ ಪ್ರತಿರೂಪಿತ ವಸ್ತುವು ಅಪ್ರಕೃತ.

ಕ್ಲೈವ್ ಬೆಲ್, ರೋಜರ್ ಫ್ರೈ ಮುಂತಾದವರ ಪ್ರಕಾರ ಆಕರ್ಷಣೀಯವಾಗಿ ವರ್ಣ, ರೇಖೆಗಳನ್ನು ಸಂಯೋಜಿಸುವುದೇ ಕಲಾವಿದನ ಗುರಿ, ಅವನು ಯಾವುದಾದರೂ ವಸ್ತುವನ್ನು ಪ್ರತಿರೂಪಿಸಲಿ, ಬಿಡಲಿ ಅದು ಅವನ ಕಲಾ ಸೌಂದರ್ಯಕ್ಕೆ ಅಪಕೃತ, ಈ ಸಂಯೋಜನೆಯ ಮುಖ್ಯ ಲಕ್ಷಣ ಸಮಗ್ರತೆ. ಚಿತ್ರದಲ್ಲಿನ ಪ್ರತಿ ಅಂಗಕ್ಕೂ ಇನ್ನೊಂದಕ್ಕೂ ಇರುವ ವ್ಯತ್ಯಾಸವಿರಬೇಕು. ಆದರೆ ಇವೆಲ್ಲವೂ ಒಂದಾಗಿ ಸೇರಿ ಚಿತ್ರಕ್ಕೆ ಸಮಗ್ರತೆಯನ್ನೂ, ಪೂರ್ಣತೆಯನ್ನೂ ಕೊಡಬೇಕು. ಅದಿಲ್ಲದೆ ಚಿತ್ರದ ವಿವಿಧ ಅಂಗಗಳಲ್ಲಿ ಸಮಗ್ರತೆಯಿಲ್ಲದಿದ್ದರೆ ಅದು ನೋಡುಗನಲ್ಲಿ ಗೊಂದಲವನ್ನುಂಟು ಮಾಡುತ್ತದೆ. ಆದ್ದರಿಂದ ಚಿತ್ರದಲ್ಲಿ ಪ್ರತಿಯೊಂದು ಅಂಶವೂ ಉಳಿದ ಎಲ್ಲಾ ಅಂಶಗಳಿಗೂ ತನ್ಮೂಲಕ ಪೂರ್ಣತೆಗೂ ಸಂಬಂಧಿಸಿದಂತಿರಬೇಕು. ಇದು ಉತ್ತಮ ಕಲಾಕೃತಿಯ ಲಕ್ಷಣ.

ಪ್ರಕೃತಿಯ ವಿವಿಧ ಮುಖಗಳಿಗೆ ಮಾನವ ತರಬಹುದಾದ ಪರಿವರ್ತನೆಯೇ ಅಂದರೆ ನಮ್ಮ ಸುತ್ತಲಿನ ನಿಸರ್ಗ, ಸೂರ್ಯ, ಚಂದ್ರ ಇತ್ಯಾದಿ ನಮ್ಮ ಕಣ್ಣ ಮುಂದೆ ಕಾಣಿಸುವ ವಸ್ತುಗಳು ಕಲೆಯಾಗುವುದಿಲ್ಲ. ಅವೆಲ್ಲ ಪ್ರಕೃತಿ. ಕ್ರೋಷೆ ಈ ಅನುಕರಣೆ, ಕಲೆಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದಾನೆ. ಯಾವುದೇ ಕಲಾವಿದನ ಮನಸ್ಸಿನಲ್ಲಿ ಅಚ್ಚೊತ್ತಿದ ಮೂಲರೂಪದ ಅನುಕರಣೆಯು ಅಭಿವ್ಯಕ್ತಿಯಲ್ಲಿ ಸಂಪೂರ್ಣ ರೂಪದಲ್ಲಿ ಬೆಳಕಿಗೆ ಬರುವುದಿಲ್ಲವೆಂದು ಅವನು ಹೇಳುತ್ತಾನೆ. ಅಂದರೆ ನಿಸರ್ಗ ಹಾಗೂ ಅದರ ಆಧಾರದ ಮೇಲೆ ಕವಿಯ ಅಥವಾ ಕಲಾವಿದನ ಮನದೊಳಗಿನ ಭಿತ್ತಿಯಲ್ಲಿ ಆಕಾರವನ್ನು ಪಡೆದ ಇಚ್ಛಿತ ಪ್ರತಿಕೃತಿ ಹಾಗೂ ಇವೆರಡೂ ಕಲಾವಿದನ ನಿಶ್ಚಿತ ಮಾಧ್ಯಮದಲ್ಲಿ ಕಾಣಿಸಿಕೊಳ್ಳುವ ಪ್ರಮಾಣದಲ್ಲಿನ ಅಂತರಗಳ ಬಗ್ಗೆಯೂ ಚರ್ಚಿಸುತ್ತಾನೆ. ನಿಸರ್ಗ(ಮೂಲಭಿತ್ತಿ), ಕಲಾವಿದನ ಮನಸ್ಸು(ಅಂತರ್ಭಿತ್ತಿ) ಹಾಗೂ ಕಲಾವಿದ ಸೃಷ್ಟಿಸಿದ ಚಿತ್ರ(ಅಭಿವ್ಯಕ್ತಿ) ಈ ಮೂರನ್ನು ಊಹಿಸಬಲ್ಲ ಸಹೃದಯ ಇವುಗಳ ಭೇದದಿಂದ ಕಲಾ ಸೌಂದರ್ಯವನ್ನು ಪತ್ತೆ ಹಚ್ಚುತ್ತಾನೆ. ಕಲಾವಿದನ ಮನಸ್ಸಿನಲ್ಲಿ ಮೂಡಿದ ಚಿತ್ರ ಹಾಗೂ ಅವನ ಮಾಧ್ಯಮದ ಮೂಲಕ ಸೃಷ್ಟಿಸಿದ ಚಿತ್ರ ಇವುಗಳ ನಡುವೆ ಇರುವ ಅಂತರವನ್ನು ಆದಷ್ಟೂ ಕಡಿಮೆ ಮಾಡುವ ಪ್ರಾಮಾಣಿಕ ಪ್ರಯತ್ನ ಕಲೆ. ಇದಕ್ಕೆ ಕೌಶಲ್ಯ ಮತ್ತು ಸೃಷ್ಟಿಸುವ ಪ್ರತಿಭೆಗಳು ಅವಶ್ಯಕ. ಈ ಕೌಶಲ್ಯ ಹಾಗೂ ಸೃಷ್ಟಿಸುವ ಪ್ರತಿಭೆಯನ್ನು

ಪ್ರಜ್ಞಾಪೂರ್ವಕವಾಗಿ ಬಳಸಿ ಒಂದು ನಿಶ್ಚಿತವಾದ ಸೌಂದರ್ಯಾನುಭವವನ್ನು ರೂಪಿಸುವುದೇ ಕಲೆಯ ಕೆಲಸ. ಅಂದರೆ ಒಂದು ಜನಾಂಗದ ಸಂಸ್ಕೃತಿಯನ್ನು ಕಲಾತ್ಮಕವಾಗಿ ಹಿಡಿದಿಡುವ ಪ್ರಯತ್ನ ಕಲೆಯದು ಎನ್ನುವ ಅಭಿಪ್ರಾಯವೂ ಇದೆ. ಅವನ ಪ್ರಕಾರ ಕಲಾವಿದನ ಮನಸ್ಸಿನಲ್ಲಿ ಎರಕಗೊಂಡ ಮೂಲರೂಪದ ಅನುಕರಣೆಯೆಂಬುದು ಅಭಿವ್ಯಕ್ತಿಯಲ್ಲಿ ಪೂರ್ಣ ರೂಪದಲ್ಲಿ ಬೆಳಕಿಗೆ ಬರುವುದಿಲ್ಲ.

ಸುಸ್ಯಾನ್ ಲ್ಯಾಂಗರ್ "ಕಲೆಗಳು ವ್ಯಕ್ತಿ ನಿಷ್ಠವಾದ ವಾಸ್ತವಿಕತೆಯನ್ನು ವಸ್ತುನಿಷ್ಠಗೊಳಿಸುತ್ತದೆ. ನಿಸರ್ಗದ ಬಾಹ್ಯಾನುಭವಗಳನ್ನು ವ್ಯಕ್ತಿಗತವನ್ನಾಗಿಸುತ್ತವೆ. ಕಲೆಯಲ್ಲಿ ಶಿಕ್ಷಣ ಎಂದರೆ ಅನುಭೂತಿಗಳ ಶಿಕ್ಷಣ, ಭಾವನೆಗಳ ಶಿಕ್ಷಣ; ಈ ಶಿಕ್ಷಣವನ್ನು ಅಲಕ್ಷ್ಯ ಮಾಡಿದ ಸಮಾಜ ಯಾವುದೇ ರೂಪ, ನಿಯಂತ್ರಣ ಇಲ್ಲದ ಭಾವನೆಯ ವಶವಾಗುತ್ತದೆ. ಕೆಟ್ಟಕಲೆ ಭಾವನೆಯನ್ನು ಹೊಲೆಗೆಡಿಸುತ್ತದೆ. ಆದ್ದರಿಂದ ಕೆಟ್ಟಕಲೆ ಇರುವುದಕ್ಕಿಂತ ಕಲೆಯೇ ಇಲ್ಲದಿರುವುದು ಉತ್ತಮ."

ಹೀಗೆ ಶತಮಾನಗಳಿಂದ ಕಲೆಯನ್ನು ಕುರಿತು ನೂರಾರು ಹೇಳಿಕೆಗಳು, ವ್ಯಾಖ್ಯೆಗಳು, ಅಭಿಪ್ರಾಯಗಳು ಬಂದಿವೆ, ಬರುತ್ತಿವೆ. ಹೀಗೆ ಇವುಗಳನ್ನೆಲ್ಲ ಚರ್ಚಿಸುತ್ತ ಹೋದರೆ ಸಾಮಾನ್ಯರಲ್ಲಿ ಗೊಂದಲ ನಿರ್ಮಾಣವಾಗುವಷ್ಟು ಹೇಳಿಕೆಗಳಿವೆ. ವಿಶ್ಲೇಷಣೆಗಳಿವೆ ಇವುಗಳನ್ನೆಲ್ಲ ಪಕ್ಕಕ್ಕಿಟ್ಟು ಒಟ್ಟಿನಲ್ಲಿ "ಕಲಾವಿದನ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಯನ್ನು ಕಲೆ" ಎಂದು ಸರಳವಾಗಿ ಹೇಳಬಹುದೆಂದೆನಿಸುತ್ತದೆ. ಅದರಂತೆಯೇ ಮುದ ನೀಡುವಂತಹ ಆಕೃತಿಗಳನ್ನು ಸೃಷ್ಟಿಸುವ ಕಲಾತ್ಮಕ ಪ್ರಯತ್ನವೇ ಕಲೆ ಎಂದೆನ್ನಲೂಬಹುದು. ಕಥೆಗಾರ ಯಶವಂತ ಚಿತ್ತಾಲರು ಹೀಗೆ ಹೇಳುತ್ತಾರೆ, "ಕಲೆ ಎಂದರೆ ಮುಖ್ಯವಾಗಿ ನಮ್ಮ ಸುಪ್ತ ಪ್ರಜ್ಞೆಗೆ ನಾವು ಜಾಗೃತ ಸ್ಥಿತಿಯಲ್ಲಿ, ಎಚ್ಚರದ ಸ್ಥಿತಿಯಲ್ಲಿ ಆಕಾರ ಕೊಡುವ ವಿಧಾನ. ಈ 'ಎಚ್ಚರ'ದ ಅಂಶದಿಂದಾಗಿಯೇ ಅದು ಮಾನವ ಮನಸ್ಸಿನ ಉಳಿದ ಆವಿಷ್ಕಾರಗಳಾದ ಪುರಾಣಗಳು(Myths), ಕನಸುಗಳು ಹಾಗೂ ನ್ಯೂರೊಸಿಸ್(ನರವ್ಯಾಧಿ) ಇವುಗಳಿಂದ ಬೇರೆಯಾಗುತ್ತದೆ. ಹೆಸರಾಂತ ಮನಶ್ಶಾಸ್ತ್ರಜ್ಞ ಕಾರ್ಲ್ ಯೂಂಗನ ಪ್ರಕಾರ ಮನುಷ್ಯನ ಚಿತ್ತ ಎಲ್ಲ ಮಾನವೀಯ ಚಟುವಟಿಕೆಗಳಿಗೆ — ಸಂಸ್ಕೃತಿ, ನಾಗರಿಕತೆಗಳಿಗೆ — ಕೇಂದ್ರ ಸ್ಥಾನವಾಗಿದೆ. ಈ ಚಟುವಟಿಕೆಗಳ ಮೂಲಕವಾಗಿಯೇ ಮನುಷ್ಯನ ಜಾಗೃತ ಪ್ರಜ್ಞೆಯು ಸುಪ್ತಪ್ರಜ್ಞೆಯ ತತ್ವಗಳನ್ನು ತನ್ನಲ್ಲಿ ನಿರಂತರವಾಗಿ ಅರಗಿಸಿಕೊಳ್ಳುತ್ತ ವಿಕಾಸಗೊಳ್ಳುತ್ತದೆ."

ಕಲೆ ಎಂದರೇನು ಎಂಬುದನ್ನು ಸ್ಪಷ್ಟವಾಗಿ ತಿಳಿಯಲು ಸೌಂದರ್ಯ ಎನ್ನುವ ಪದವನ್ನು ಗಮನಿಸಬೇಕು. ನಾವು ಎಷ್ಟೋ ಬಾರಿ ಕಲೆ ಮತ್ತು ಸೌಂದರ್ಯ ಎಂಬ ಪದಗಳನ್ನು ಅದು ಹೊಂದದಂತಹ ಸಂದರ್ಭಗಳಲ್ಲೂ ಬಳಸುತ್ತೇವೆ. ಅಂದರೆ ನಮಗೆ ಇಷ್ಟವಾದವುಗಳನ್ನು ಸುಂದರ ಪದದೊಡನೆ ತಳಕುಹಾಕುತ್ತೇವೆ. ಉದಾಹರಣೆಗೆ ಈ ಹುಡುಗಿ ಸುಂದರಳಾಗಿದ್ದಾಳೆ; ಈ ಗುಲಾಬಿ ಸುಂದರವಾಗಿದೆ, ಅವನ ಹಾಡು ಸುಂದರವಾಗಿತ್ತು ಎಂದೆಲ್ಲ ಬಳಸುತ್ತೇವೆ. ನನ್ನ ದೃಷ್ಟಿಯಲ್ಲಿ ಇದು ಸರಿಯಾದ ಬಳಕೆಯಲ್ಲ. ಅದರ

ಬದಲಿಗೆ ಆ ಹುಡುಗಿಯ ದೇಹ, ಮುಖಗಳು ನನ್ನ ಬಯಕೆಗಳನ್ನು ತಣಿಸುವಂತಿವೆ, ಆ ಗುಲಾಬಿಯ ಮೃದುತ್ವದಿಂದಾಗಿ ಸ್ಪರ್ಶಿಸೋಣ ಎನಿಸುತ್ತದೆ, ಅದರ ಆಕೃತಿ ಮುದ್ದಾದ ಅನುಭವವನ್ನು ನೀಡುತ್ತದೆ; ಅವನ ಹಾಡು ನನ್ನ ಕಿವಿಗೆ ಹಿತಕರವಾಗಿದೆ ಎಂದು ಮುಂತಾಗಿ ಹೇಳುವುದೇ ಸರಿಯಾದುದು. ಇದಷ್ಟೇ ಅಲ್ಲ, ಕೆಲವೊಮ್ಮೆ 'ಸುಂದರವಾಗಿರುವುದೆಲ್ಲ ಕಲೆ' ಎಂದು ಹಾಗೂ 'ಸುಂದರವಾಗಿಲ್ಲದಿರುವುದು ಕಲೆಯಲ್ಲ' ಎಂದು ಭಾವಿಸುತ್ತೇವೆ. ಹೀಗೆ 'ಕುರೂಪ'ವನ್ನು ಕಲೆಯ ತಿರಸ್ಕಾರ ಎಂದು ಭಾವಿಸುತ್ತೇವೆ. ನಾವು ಕುರೂಪ ಎಂದು ಕರೆಯುವುದರಲ್ಲೂ ಸೌಂದರ್ಯವಿದೆ. ಅಮೆರಿಕದ ಕಲಾವಿದ ವಿಲೆಮ್ ಡಿ ಕೂನಿಂಗ್‌ನ ಕೃತಿಗಳನ್ನು ನೋಡಿದರೆ ಸಾಮಾನ್ಯರು ಅದನ್ನು ಕುರೂಪ ಎನ್ನಬಹುದು. ಆದರೆ ಕಲೆಯ ಕಣ್ಣುಳ್ಳವರು ಅದರಲ್ಲಿ ಸೌಂದರ್ಯವನ್ನು ಕಾಣುತ್ತಾರೆ.

ಚಿತ್ರಕಲೆಯು ವಿಜ್ಞಾನ ಅಥವಾ ಗಣಿತಗಳಂತೆ ಬುದ್ಧಿಗಷ್ಟೇ ಸಂಬಂಧಿಸಿದುದಲ್ಲ. ಮುಖ್ಯವಾಗಿ ಮನುಷ್ಯನ ಭಾವನೆಗೆ ಸಂಬಂಧಿಸಿದುದು. ಸಾಮಾನ್ಯವಾಗಿ ಮಾನವನ ಮಾನಸಿಕ ಕಾರ್ಯಪ್ರವೃತ್ತಿಗಳನ್ನು ಮೂರು ಭಾಗಗಳಾಗಿ ಮಾಡಬಹದು. ಮೊದಲನೆಯದು ಬುದ್ಧಿ ಅಥವಾ ವಿಚಾರಕ್ಕೆ ಸಂಬಂಧಿಸಿದ್ದರೆ, ಎರಡನೆಯದು ಇಚ್ಛೆಗೆ ಸಂಬಂಧಿಸಿದ್ದು. ಮೂರನೆಯದು ಭಾವನೆಗೆ ಸಂಬಂಧಪಟ್ಟಿದೆ. ಇದು ಜೀವನದಲ್ಲಿನ ಆಗು ಹೋಗುಗಳಿಗೆ, ಸನ್ನಿವೇಶಗಳಿಗೆ ಭಾವನಾ ಪ್ರತಿಕ್ರಿಯಾತ್ಮಕ ರೂಪದ್ದು. ಇಂತಹ ಅನುಭವ ಪಡೆದಾಗ ನಾವು ಸಾಮಾನ್ಯವಾಗಿ ಸುಂದರವಾಗಿದೆ ಎಂದೋ ಅಥವಾ ಸುಂದರವಾಗಿಲ್ಲ ಎಂದೋ ಅಭಿಪ್ರಾಯ ವ್ಯಕ್ತಪಡಿಸುತ್ತೇವೆ. ಕಲೆಯು ಮಾನವನ ಮಾನಸಿಕ ಪ್ರವೃತ್ತಿಗಳಲ್ಲಿನ ಈ ಕೊನೆಯ ಭಾಗಕ್ಕೆ ಸಂಬಂಧಿಸಿದೆ. ಇದರ ವ್ಯವಹಾರ ಮಾನವನ ಹೃದಯಗಳೊಡನೆ. ಹೀಗಾಗಿ ಈ ಬಗ್ಗೆ ಚರ್ಚಿಸುವಾಗ ಎಷ್ಟು ಹೃದಯಗಳಿರುತ್ತವೆಯೋ, ಅಂದರೆ ಎಷ್ಟು ವ್ಯಕ್ತಿಗಳಿರುತ್ತಾರೋ ಅಷ್ಟೇ ಅಭಿಪ್ರಾಯಗಳು ಬರಬಹುದು. ವಿಜ್ಞಾನ ಅಥವಾ ಗಣಿತಗಳಲ್ಲಿ ಪ್ರಯೋಗಗಳಿಂದ ಕಂಡುಹಿಡಿಯಲ್ಪಟ್ಟ, ಸಾಧಿಸಲ್ಪಟ್ಟ ನಿಶ್ಚಿತವಾದ ಅಭಿಪ್ರಾಯಗಳಿವೆ. ಈ ಅಭಿಪ್ರಾಯಗಳು ಸಾಮಾನ್ಯ ಪರಿಸ್ಥಿತಿಯಲ್ಲಿ ಬದಲಾಗುವುದಿಲ್ಲ. ಆದರೆ ಕಲೆಯಲ್ಲಿ ಇದು ಸಾಧ್ಯವಾಗುವುದಿಲ್ಲ. ಏಕೆಂದರೆ ಭಾವನೆಗೆ ನಿರ್ದಿಷ್ಟವಾದ ಸೀಮಾರೇಖೆಯನ್ನು ಎಳೆಯಲು ಬರುವುದಿಲ್ಲ. ಈ ಕಾರಣಕ್ಕಾಗಿಯೇ ಒಬ್ಬರಿಗೆ ಇಷ್ಟವಾದುದು ಇನ್ನೊಬ್ಬರಿಗೆ ಇಷ್ಟವಾಗದಿರಬಹುದು. ಹೀಗೆ ಕಲೆಯ ವಿಷಯದಲ್ಲಿ ಅಭಿಪ್ರಾಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು.

ಜಗತ್ತಿನಲ್ಲಿ ನಡೆಯುವ ಅನೇಕ ಘಟನೆಗಳನ್ನು, ಬದಲಾವಣೆಗಳನ್ನು ನೋಡಿದಾಗ ಪ್ರತಿಯೊಬ್ಬನಲ್ಲೂ ಸಂವೇದನೆಯುಂಟಾಗುತ್ತದೆ. ತನ್ನ ಕೆಲವು ಅನಿಸಿಕೆಗಳನ್ನು ಹೇಗಾದರೂ ಅಭಿವ್ಯಕ್ತಿಸಬೇಕು; ಹೇಳಬೇಕೆನ್ನುವ ಆ ಉದ್ವೇಗದಿಂದ ಬಿಡುಗಡೆ ಹೊಂದಬೇಕು ಎನ್ನುವ ಆಕಾಂಕ್ಷೆ ಎಲ್ಲರಲ್ಲೂ ಇರುತ್ತದೆ. ಆದರೆ ಕೆಲವರಿಗೆ ವಿಶೇಷವಾದ ಮಾಧ್ಯಮಗಳ ಮೂಲಕ ಅದನ್ನು ಹೊರಹಾಕುವ ಜಾಣ್ಮೆ, ಕೌಶಲ ಇರುತ್ತದೆ. ಹೀಗೆ ಅದನ್ನು

ಮಾತುಗಳ ಮೂಲಕ ಹೊರ ಹಾಕುವವನು ಭಾಷಣಕಾರನಾಗುತ್ತಾನೆ; ಆಂಗಿಕ ಅಭಿನಯದ ಮೂಲಕ ವ್ಯಕ್ತಪಡಿಸುವವನು ನೃತ್ಯಗಾರನಾಗುತ್ತಾನೆ. ಅಂತೆಯೇ ವರ್ಣ, ರೇಖೆಗಳ ಮೂಲಕ ಹೊರಹಾಕುವ ಕೌಶಲ್ಯವುಳ್ಳವನು ಚಿತ್ರಕಲಾವಿದನಾಗುತ್ತಾನೆ. ಮರ, ಕಲ್ಲು, ಲೋಹಗಳ ಮೂಲಕ ಅಭಿವ್ಯಕ್ತಿಸಬಲ್ಲವನು ಶಿಲ್ಪಿಯಾಗುತ್ತಾನೆ. ಹೀಗೆ ಮಾಧ್ಯಮಗಳು ಬದಲಾದರೂ ಕಲಾವಿದರ ಮೂಲ ಭಾವನೆಗಳ ನೆಲೆ ಒಂದೇ ಆಗಿರುತ್ತದೆ. ಈಗಿನ ಅಭಿಪ್ರಾಯದ ಪ್ರಕಾರ ಒಂದು ಘಟನೆಯನ್ನು ಅಥವಾ ದೃಶ್ಯವೊಂದನ್ನು ಛಾಯಾಚಿತ್ರವೊಂದು ದಾಖಲಿಸುವಂತೆ ತದ್ರೂಪವಾಗಿ ಚಿತ್ರಿಸುವುದನ್ನು ಕಲೆ ಎಂದು ಒಪ್ಪಲಾಗುವುದಿಲ್ಲ, ಅದು ಹೆಚ್ಚೆಂದರೆ ಕುಶಲಕಲೆ (Craft work) ಆದೀತು ಅಷ್ಟೇ. ಯುರೋಪಿನ ಪುನರುಜ್ಜೀವನ ಕಾಲದಲ್ಲಿ ವಿಜ್ಞಾನದ ಪ್ರಭಾವಕ್ಕೆ ಒಳಗಾದ ಕಲಾವಿದ ಒಂದು ಅವಧಿಯಲ್ಲಿ ವಾಸ್ತವವಾದಕ್ಕೆ ಮನಸೋತ. ಆದರೆ ಈ ವಾಸ್ತವವಾದದಲ್ಲಿರುವ ಮಿತಿಗಳು ಹಾಗೂ ದೋಷಗಳು ಅವನಿಗೆ ತಿಳಿದಾಗ ಅದಕ್ಕೆ ಬದಲಾಗಿ ಪ್ರತೀಕವಾದವನ್ನು ಅನುಸರಿಸಲು ಆರಂಭಿಸಿದ. ನಮ್ಮ ದೇಶದಲ್ಲಿ ರವಿವರ್ಮನ ಕಾಲಕ್ಕಿಂತ ಹಿಂದೆ ಇದ್ದ ಚಿತ್ರಗಳು ತದ್ರೂಪ ಚಿತ್ರಗಳಲ್ಲ. ಈ ತದ್ರೂಪ ಚಿತ್ರಣ ನಮ್ಮಲ್ಲಿ ಬ್ರಿಟಿಶರ ಕಾಲದಲ್ಲಿ ಬಂದದ್ದು. ನಮ್ಮ ಚಿಕಣಿ ಚಿತ್ರಗಳು (miniatures), ವಿವಿಧೆಡೆಗಳಲ್ಲಿರುವ ಭಿತ್ತಿಚಿತ್ರಗಳು, ಗುಹಾಚಿತ್ರಗಳು ಇತ್ಯಾದಿಗಳನ್ನು ಪರಿಶೀಲಿಸಿದರೆ ಈ ಅಂಶ ನಮಗೆ ಇನ್ನಷ್ಟು ಸ್ಪಷ್ಟವಾಗುತ್ತದೆ. ಅಂದರೆ ಕಳೆದ ಶತಮಾನದ ಅಂತ್ಯದಲ್ಲಷ್ಟೇ ತದ್ರೂಪ ಚಿತ್ರಣ ನಮ್ಮ ದೇಶದಲ್ಲಿ ಚಲಾವಣೆಗೆ ಬಂತು. ಯಥಾವತ್ ಚಿತ್ರಣವನ್ನು ಈ ಆಧುನಿಕ ಸಂದರ್ಭದಲ್ಲಿ ಕಲೆ ಎಂದು ಒಪ್ಪಲಾಗುವುದಿಲ್ಲ.

ಈ ಮೇಲಿನ ಅಭಿಪ್ರಾಯವನ್ನು ಸ್ಪಷ್ಟಪಡಿಸಲು ಈ ಉದಾಹರಣೆ ನೋಡೋಣ. ರಸ್ತೆಯಲ್ಲಿ ಒಂದು ಅಪಘಾತ ನಡೆದಿದೆಯೆಂದು ಭಾವಿಸೋಣ. ಆ ಅಪಘಾತವನ್ನು ನೂರಾರು ಜನ ನೋಡುತ್ತಾರೆ. ಆದರೆ ತಮ್ಮ ವ್ಯಕ್ತಿತ್ವಕ್ಕೆ ಅನುಗುಣವಾಗಿ ಪ್ರತಿಯೊಬ್ಬರೂ ಅದನ್ನು ನೋಡುವ ದೃಷ್ಟಿ ಬೇರೆ ಬೇರೆಯಾಗಿರುತ್ತದೆ. ಒಬ್ಬ ಪೊಲೀಸ್ ಅಧಿಕಾರಿ, ಒಬ್ಬ ಬಸ್ ಡ್ರೈವರ್, ಒಬ್ಬ ವೈದ್ಯ, ಪತ್ರಿಕಾ ವರದಿಗಾರ, ಕಥೆಗಾರ ಅದೇ ಅಪಘಾತವನ್ನು ತಮ್ಮದೇ ಆದ ದೃಷ್ಟಿಕೋನಗಳಿಂದ ನೋಡುತ್ತಾರೆ. ಅದನ್ನು ಪತ್ರಿಕಾ ವರದಿಗಾರ ಆ ಘಟನೆಯ ಯಥಾವತ್ ಚಿತ್ರಣವನ್ನು ತನ್ನ ಪತ್ರಿಕೆಯ ಮೂಲಕ ಪ್ರಕಟಿಸುತ್ತಾನೆ. ಇಲ್ಲಿ ಅವನು ಹೊಸದಾಗಿ ಕಲ್ಪಿಸಿಕೊಂಡು ಏನನ್ನೂ ಬರೆಯಲಾಗುವುದಿಲ್ಲ. ನಡೆದುದನ್ನು ನಡೆದಂತೆಯೇ ಬರೆಯಬೇಕಾಗುತ್ತದೆ. ಆ ಅಪಘಾತದ ಕೇಸಿನ ವಿಚಾರಣೆಯಲ್ಲಿನ ಸಾಕ್ಷಿದಾರನೂ ಅಷ್ಟೇ. ಆದರೆ ಆ ಘಟನೆಯನ್ನು ನೋಡಿದ ಕಥೆಗಾರನೊಬ್ಬ ಆ ಘಟನೆಯ ಪ್ರೇರಣೆಯಿಂದ ಅದರ ಸುತ್ತ ತನ್ನ ಕಲ್ಪನೆಗಳನ್ನು, ಅನಿಸಿಕೆಗಳನ್ನು ಸೇರಿಸಿ ಕಥೆಯೊಂದನ್ನು ಸೃಷ್ಟಿಸುತ್ತಾನೆ. ಇದು ನಡೆದ ಘಟನೆಯಿಂದ ಬೇರೆಯೇ ಆಗಿರಬಹುದು. ಹೀಗೆಯೇ ಒಬ್ಬ ಕಲಾವಿದನೂ ಆ ಅಪಘಾತವನ್ನು ಇದ್ದಂತೆಯೇ ಚಿತ್ರಿಸದೆ ಆ ಘಟನೆಗೆ ತನ್ನ ಅನಿಸಿಕೆಗಳನ್ನು ಸೇರಿಸಿ ಕಲಾತ್ಮಕ ಅಂಶಗಳ ಮೂಲಕ ಅದನ್ನು ತನ್ನ ಕಲಾಕೃತಿಯಲ್ಲಿ ಸೃಷ್ಟಿಸುತ್ತಾನೆ. ಇಲ್ಲಿ ವಿಶ್ವಪ್ರಸಿದ್ಧ ಕಲಾವಿದ ಪಾಬ್ಲೋ ಪಿಕಾಸೋವಿನ

'ಗರ್ನಿಕಾ' ಕೃತಿಯನ್ನು ಉದಾಹರಿಸಬಹುದು. ಸ್ಪೈನ್ ದೇಶದ ಗರ್ನಿಕಾ ಪಟ್ಟಣದ ಮೇಲೆ ನಡೆದ ಬಾಂಬ್ ಧಾಳಿಯಿಂದ ಪ್ರೇರಿತನಾಗಿ ಅದನ್ನು ಸೃಷ್ಟಿಸಿದ. ಆದರೆ ಅದು ಯಥಾವತ್ ಚಿತ್ರಣವಲ್ಲ. ಅದನ್ನು ಆ ಘಟನೆಗಷ್ಟೇ ಸೀಮಿತಗೊಳಿಸದೆ ತನ್ನ ಅನಿಸಿಕೆಗಳನ್ನು ಸಾರ್ವತ್ರಿಕಗೊಳಿಸುವ, ಸಾರ್ವಕಾಲಿಕಗೊಳಿಸುವ ಪ್ರಯತ್ನ ಮಾಡಿದ್ದಾನೆ. ಹೀಗೆ ನಿಜವಾದ ಕಲಾವಿದನ ಕೆಲಸ ಪತ್ರಿಕಾ ವರದಿಗಾರನಂತೆ ವರದಿ ಮಾಡುವುದಲ್ಲ. ಛಾಯಾಚಿತ್ರಗಾರನ ಕೆಲಸವೂ ಅಲ್ಲ. ಅದೇ ಘಟನೆಯನ್ನು ಬೇರೆ ಬೇರೆ ಕಲಾವಿದರು ಚಿತ್ರಿಸಿದರೂ ಅದರಲ್ಲಿ ವೈವಿಧ್ಯವಿರುತ್ತದೆ. ಇಲ್ಲಿ ಸೃಜನಶೀಲತೆ ಮುಖ್ಯ. ಆ ಅಪಘಾತ ಸಾಮಾನ್ಯನಿಗೆ ಕರುಣೆ ಹುಟ್ಟಿಸುವಂತದ್ದಾದರೂ ಆ ಕಲಾಕೃತಿ ಕರುಣೆ ಹುಟ್ಟಿಸಬೇಕಾಗಿಲ್ಲ. ಒಟ್ಟಾರೆಯಾಗಿ ವೀಕ್ಷಕನಿಗೆ ಭಾವನಾ ಸಂತೃಪ್ತಿ ಕೊಡಬೇಕೆಂಬುದೇ ಅದರ ಗುರಿ. ಹೀಗೆ ಕಲಾಕೃತಿಯ ಮೊದಲ ಉದ್ದೇಶ ಭಾವನಾ ಸಂತೃಪ್ತಿ (emotional satisfaction) ನೀಡುವುದು. ಅದರ ಎರಡನೆಯ ಹಾಗೂ ನಂತರದ ಉದ್ದೇಶಗಳು ಬೇರೆ ಏನೇ ಆಗಿರಬಹುದು.

ಕಲೆಯ ಮುಖ್ಯ ಉದ್ದೇಶ ಸೌಂದರ್ಯ ಸೃಷ್ಟಿ. ತನ್ಮೂಲಕ ನೋಡುಗನಲ್ಲಿ ಸೌಂದರ್ಯಾನುಭವ ಉಂಟುಮಾಡುವುದು. ಒಂದು ಸುಂದರವಾದ ನಿಸರ್ಗ ದೃಶ್ಯವನ್ನು ನೋಡಿದಾಗ, ಅಲ್ಲಿರುವ ರಮ್ಯತೆಯನ್ನು, ವರ್ಣ ವೈಭವವನ್ನು, ಆಕಾರಗಳ ಏರಿಳಿತದ ಮೂಲಕ ಉಂಟಾಗುವ ಆಹ್ಲಾದಕರ ಅನುಭವವನ್ನು ಮೆಚ್ಚಿಕೊಂಡು ಅದು ಒದಗಿಸುವ ಸೊಗಸಿನಲ್ಲಿ ತಲ್ಲೀನವಾಗಬೇಕಾದುದು ಯಾವುದೇ ಕಲಾಸಕ್ತನ ಮೊತ್ತಮೊದಲ ಕೆಲಸ. ಅದಕ್ಕೆ ಬದಲಾಗಿ ಅಲ್ಲಿರುವಂತಹ ಮರಗಳಲ್ಲಿ ಶ್ರೀಗಂಧದ ಮರಗಳೆಷ್ಟಿವೆ? ತೇಗದ ಮರಗಳೆಷ್ಟಿವೆ? ಅವುಗಳನ್ನು ಕಡಿದು ಮಾರಿದರೆ ಎಷ್ಟು ಹಣ ದೊರೆಯಬಹುದು? ಎನ್ನುವ ಪ್ರಶ್ನೆ ಮೊದಲು ಎದುರಾಗಬಾರದು. ಹಾಗಾದಾಗ ಅದು ವ್ಯಾವಹಾರಿಕವೂ, ಪ್ರಾಯೋಜನಿಕವೂ ಆದುದಾಗುತ್ತದೆ. ಕಲೆಯ ಉದ್ದೇಶ ವ್ಯಾವಹಾರಿಕವಾದುದಲ್ಲ, ಅದರ ಮೊದಲ ಉದ್ದೇಶ ಸೌಂದರ್ಯಾತ್ಮಕವಾದುದು. ನಮ್ಮ ಭಾರತೀಯ ಕಾವ್ಯ ಮೀಮಾಂಸೆಯ ಸಂದರ್ಭದಲ್ಲೂ ಇದೇ ಅಭಿಪ್ರಾಯವನ್ನು ನಮ್ಮ ಆಲಂಕಾರಿಕರು ವ್ಯಕ್ತಪಡಿಸಿದ್ದಾರೆ. ಕಾವ್ಯದಿಂದ(ಕಲೆಯಿಂದ) ಎಲ್ಲರೂ ಪಡೆಯುವುದು ರಸಾಸ್ವಾದನೆಯೊಂದೇ. ಅದರಿಂದ ನಮಗೆ ತಿಳಿವಳಿಕೆಯೂ ಬರಬೇಕಾಗಿಲ್ಲ ಎಂದು ನಮ್ಮ ಪ್ರಾಚೀನ ಆಲಂಕಾರಿಕರಲ್ಲಿ ಒಬ್ಬನಾದ ಭಟ್ಟನಾಯಕ ಹೇಳಿದ್ದಾನೆ. ಹೀಗೆ ಕಲೆಯಲ್ಲಿ ರಸಾನುಭವವೇ ಪರಮಗುರಿ. ಅದರ ಮೂಲಕ ತತ್ತ್ವಗಳನ್ನು, ನೀತಿಗಳನ್ನೂ ಹೇಳಬಹುದಾದರೂ ಅದು ದೃಶ್ಯ ಭಾಷೆಯ ಮಿತಿಗೆ ಒಳಪಟ್ಟಿರಬೇಕು. ಅದರ ಬದಲಿಗೆ ಅಮೋಘವಾದ ತತ್ವವನ್ನೋ, ನೀತಿಯನ್ನೋ ಮಾತ್ರ ಹೇಳಲು ತೊಡಗಿದರೆ ಅದು ಕಲೆಯಾಗಿ ಸೋತಿದೆ ಎನ್ನಬಹುದು.

ಕಲಾವಿದನ ಮನೋಧರ್ಮ ಅವನ ಸಾಮಾಜಿಕ ಆವರಣದಿಂದ ರೂಪುಗೊಳ್ಳುತ್ತದೆ. ಅವನು ಪಡೆದ ಶಿಕ್ಷಣ, ಸಂಸ್ಕಾರಗಳು ಕೂಡಾ ಅವನ ಮನೋಧರ್ಮ ರೂಪಿಸುವಲ್ಲಿ ಸಹಕರಿಸುತ್ತವೆ, ಹೀಗೆ ತಾನು ಕಂಡ ಜಗತ್ತನ್ನು, ತಾನು ಅರ್ಥ ಮಾಡಿಕೊಂಡ

ಜಗತ್ತನ್ನು ಅವನು ತನ್ನ ಮಾಧ್ಯಮದಲ್ಲಿ ರೂಪಿಸುತ್ತಾನೆ. ಈ ಕಾರಣಕ್ಕಾಗಿಯೇ ಪ್ರತಿಯೊಬ್ಬ ಕಲಾವಿದನ ಕೃತಿಯೂ ಉಳಿದವರಿಂದ ಭಿನ್ನವಾಗಿರುತ್ತದೆ. ಒಂದೇ ದೃಶ್ಯವನ್ನು ರಚಿಸಲು ಹಲವಾರು ಕಲಾವಿದರಿಗೆ ಹೇಳಿದರೆ ಅದು ಒಂದೇ ತೆರನಾಗಿಲ್ಲದಿರುವುದಕ್ಕೆ ಇದೇ ಕಾರಣ. ನಾಥನ್ ನೋಬ್ಲರ್ ಎಂಬುವವನು ಈ ವಿಚಾರವನ್ನು ಸ್ಪಷ್ಟಪಡಿಸುತ್ತ ಇದಕ್ಕೆ ದೃಕ್‌ಗ್ರಹಿಕೆ (Perception) ಕಾರಣ ಎಂದು ಹೇಳುತ್ತಾನೆ. ಒಂದೇ ದೃಶ್ಯವನ್ನು ನೋಡುವ ವಿವಿಧ ಸಂಸ್ಕೃತಿಯಲ್ಲಿನ ಜನರಲ್ಲಿ ಅವರವರ ಸಂಸ್ಕಾರದಿಂದ, ಅನುಭವದಿಂದ ಪ್ರಭಾವಿತಗೊಳ್ಳುವ ದೃಕ್‌ಗ್ರಹಿಕೆ ಬೇರೆ ಬೇರೆಯಾಗಿರುತ್ತದೆ. ಎದುರಿಗೆ ಕಾಣುವ ವಸ್ತುಗಳನ್ನು ಕುರಿತಂತೆ, ಮೌಲ್ಯಗಳು, ಮೆಚ್ಚುಗೆಗಳು ಬೇರೆ ಬೇರೆಯಾಗಿರುತ್ತದೆ. ಈ ಕಾರಣಕ್ಕಾಗಿಯೇ ಪ್ರತಿಯೊಬ್ಬ ಕಲಾವಿದನ ದೃಕ್ ಬಿಂಬಗಳು ವಿಭಿನ್ನವಾಗಿರುತ್ತವೆ. ಜಗತ್ತಿನಲ್ಲಿ ಈ ವರೆಗೆ ಕೋಟ್ಯಾಂತರ ಕಲಾಕೃತಿಗಳು ನಿರ್ಮಾಣವಾಗಿವೆ. ಅದರಲ್ಲೂ ಶತಶತಮಾನಗಳು ಕಳೆದಂತೆ ಚಿತ್ರಶೈಲಿಯಲ್ಲಿ, ನಿರ್ವಹಣೆಯಲ್ಲಿ, ತಂತ್ರದಲ್ಲಿ, ವಸ್ತುವಿನ ಆಯ್ಕೆಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಹೀಗೆ ಮಾನವನ ಮನಸ್ಸನ್ನು ರೂಪಿಸುವ ಸಂಸ್ಕೃತಿಗಳು ಬೇರೆಯಾದಂತೆ ಕಲೆಯ ರೂಪಗಳೂ ಬದಲಾಗಿವೆ.

ಮನುಷ್ಯ ಇತರ ಪ್ರಾಣಿಗಳಿಗಿಂತ ಭಿನ್ನವಾಗಿರುವವನು; ಮಾನಸಿಕವಾಗಿ ಬೆಳೆದಿರುವವನು; ಭಾವನೆಗಳನ್ನು ಹೊಂದಿರುವವನು. ಅವನು ಸಹಜವಾಗಿ ಸಂಗ್ರಹಿಸಿಕೊಂಡ ಶಕ್ತಿಯಲ್ಲಿ ಅನಾವಶ್ಯಕ, ಇಲ್ಲವೇ ಹೆಚ್ಚಾದುದು ಕ್ರೀಡೆಯಂತೆ ಮನರಂಜನೆಯಾಗಿ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಲಲಿತಕಲೆಗಳ ಉಗಮವನ್ನು ಇಂತಹ ಅಭಿವ್ಯಕ್ತಿಯಲ್ಲಿ ಕಾಣಬಹುದು.. ಹೀಗೆ ವಿಶಾಲಾರ್ಥದಲ್ಲಿ ಕಲೆಯೂ ಒಂದು ರೀತಿಯ ಕ್ರೀಡೆಯೇ.ಅವನ ಗುರಿ ಕೇವಲ ಹೊಟ್ಟೆ-ಬಟ್ಟೆಗಳ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಷ್ಟೇ ಅಲ್ಲ. ಮಾನಸಿಕವಾಗಿ ಬೆಳೆದಿರುವ ಮಾನವನಿಗೆ ಮನರಂಜನೆಯ, ಮಾನಸಿಕ ಸಂತೃಪ್ತಿ ಪಡೆಯುವ ಅವಶ್ಯಕತೆಯಿದೆ. ಅವನ ಅರಿವಿನಿಂದಲೋ ಅಥವಾ ಆ ಅರಿವಿಲ್ಲದೆಯೋ ಅವನು ಆ ಕಡೆ ಗಮನ ಹರಿಸಿರುತ್ತಾನೆ. ಅವನ ಈ ಅವಶ್ಯಕತೆಗಳನ್ನು ಲಲಿತಕಲೆಗಳು ಪೂರೈಸುತ್ತವೆ.

ಕಲೆಯಲ್ಲಿ ಸಾಮಾನ್ಯವಾಗಿ ಈ ಅಂಶಗಳನ್ನು ಮುಖ್ಯವೆಂದು ಪರಿಗಣಿಸಲಾಗುತ್ತದೆ. ಅನುಭವವೊಂದು ಕಲಾವಿದನ ವೈಯಕ್ತಿಕದ್ದಾದರೂ ಅದು ಅವೈಯಕ್ತಿಕ ಅಥವಾ ಸಾರ್ವತ್ರಿಕಗೊಳ್ಳುವಂತಹ ಶಕ್ತಿಯುಳ್ಳದ್ದಾಗಿರಬೇಕು. ಅದರಂತೆಯೇ ಅನುಭವದ ಕಲ್ಪನೆ ಕೂಡಾ. ಒಬ್ಬ ವ್ಯಕ್ತಿಯು ಭಾವನೆಗಳನ್ನು ವ್ಯಕ್ತಪಡಿಸುವ ಕಲ್ಪನೆಯು ಉಳಿದ ಹಲವಾರು ಜನರ ಭಾವನೆಗಳನ್ನು ವ್ಯಕ್ತಪಡಿಸಬಲ್ಲ ಸಾಮಾನ್ಯ ಗುಣವನ್ನು ಗಳಿಸಿಕೊಳ್ಳುತ್ತದೆ. ಕಲೆಯು ವ್ಯಕ್ತಿಗತವಾಗಿ ಆರಂಭವಾದರೂ ಇತರ ಅನೇಕರಿಗೆ ಅರ್ಥಕೊಡುವಂತಹ, ಅನುಭವ ನೀಡುವಂತಹ ರೂಪವನ್ನು ತಳೆಯುತ್ತದೆ. ಹೀಗೆ ಕಲೆಯು ಇತರರೊಂದಿಗೆ ಸಂವಹನದ ವ್ಯವಸ್ಥೆಯೂ ಆಗುತ್ತದೆ. ಕಲಾಕೃತಿಯೊಂದನ್ನು ನೋಡಿದ ನಂತರವೂ ಅದರ ರೂಪ ಅಥವಾ ಪರಿಣಾಮಗಳು ಸಹೃದಯರ ಮನದಲ್ಲಿ ಮತ್ತೆ ಮತ್ತೆ ನೆನಪಿಗೆ ಬರುತ್ತದೆ. ಈ

ಅನುಭವಗಳು ಅಥವಾ ಅನಿಸಿಕೆಗಳು ಕಲಾವಿದನ ಅಪೇಕ್ಷಿತ ಒಂದು ಮಾಧ್ಯಮಕ್ಕೆ ನಿಷ್ಠೆಯುಳ್ಳದ್ದಾಗಿರುತ್ತದೆ. ಹೀಗೆ ತನ್ನ ಮಾಧ್ಯಮದ ಮೂಲಕ ಬೆಳೆದು ರೂಪುಗೊಳ್ಳುವ ತನಕ ಯಾವ ಕಲ್ಪನೆಯೂ ಕಲೆಯಾಗುವುದಿಲ್ಲ. ಮಾಧ್ಯಮ ಹಾಗೂ ಕಲ್ಪನೆಗಳ ಸಮ್ಮಿಲನ ಎಷ್ಟರ ಮಟ್ಟಿಗೆ ಆಗಿರುತ್ತದೆಂದರೆ ಮಾಧ್ಯಮದ ಸಾಧ್ಯತೆಯೇ ಕಲ್ಪನೆಯ ಸಾಧ್ಯತೆಯೂ ಆಗುತ್ತದೆ. ಅಂದರೆ ಕಲ್ಪನೆ ಹಾಗೂ ಮಾಧ್ಯಮಗಳು ಪರಸ್ಪರ ಸಹಕಾರಿಯಾಗಿರುತ್ತವೆ. ಹೀಗೆ ಪ್ರತಿಯೊಂದು ಮಾಧ್ಯಮದ ಸಾಧ್ಯತೆಗಳೂ ವಿಭಿನ್ನವಾಗಿರುತ್ತವೆ. ಚಿತ್ರದಲ್ಲಿ ಸಾಧ್ಯವಾಗುವಂತಹ ದೃಶ್ಯನಿರ್ಮಾಣ ಶಿಲ್ಪದಲ್ಲಿ ಸಾಧ್ಯವಾಗುವುದಿಲ್ಲ. ಅಂತೆಯೇ ಸಂಗೀತದಲ್ಲಿ ಸಾಧ್ಯವಾಗುವಂತಹ ಪರಿಣಾಮ ಚಿತ್ರದಲ್ಲಿ ಸಾಧ್ಯವಾಗದು.

ಕಲ್ಪನೆಯಿಂದ ಸೃಷ್ಟಿಯಾದುದು ಮಾತ್ರ ಕಲೆ. ಕಲಾವಿದನ ಕಲ್ಪನೆಯು ಕಲಾಕೃತಿ ರಚನೆಯೊಂದಿಗೇ ಬೆಳೆಯುತ್ತದೆ. ಹೀಗೆ ಕಲ್ಪನೆ ಬೆಳೆದಲ್ಲಿ ಕಲೆಯಿದೆ. ಆದರೆ ಅದು ಯಾವುದಾದರೂ ಕಲಾತ್ಮಕ ಮಾಧ್ಯಮದ ಮೂಲಕ ಬೆಳೆಯಬೇಕು. ಬೆಳೆಯುವಾಗ ಆಯಾ ಮಾಧ್ಯಮದ ಕೆಲವು ಮಿತಿಗಳಿಗೆ ಒಳಪಟ್ಟು ಅದರ ವೈಶಿಷ್ಟ್ಯಗಳ ಲಾಭವನ್ನು ಪಡೆಯಬೇಕು. ಇಲ್ಲದಿದ್ದರೆ ಅದು ಕಲೆಯೆನಿಸಿಕೊಳ್ಳುವುದಿಲ್ಲ.

ಕಲಾವಿದನ ಸೃಷ್ಟಿಕ್ರಿಯೆಯಲ್ಲಿ ಅವನಿಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಅವನ ಅನುಭವಗಳು ಯಾವುದೋ ಒತ್ತಡಗಳಿಂದ ಬಂದಿರಬಹುದಾದರೂ ಅವನ ಈ ಅನುಭವಗಳನ್ನು ಹೀಗೆಯೇ ಸೃಷ್ಟಿಸಬೇಕೆಂಬ ಬಾಹ್ಯ ಒತ್ತಡಗಳಿರುವುದಿಲ್ಲ. ಹಾಗೆ ಸ್ವಾತಂತ್ರ್ಯವಿರದೇ ಇನ್ನಾರದೋ ಒತ್ತಡಗಳಿಂದ ಕಲಾಕೃತಿ ರಚನೆಯಾದರೆ ಅದು ಕೆಲವೊಮ್ಮೆ ಕಲೆಯಾಗದೇ ಇರಬಹುದು. ಹೀಗೆ ಯಾವುದೇ ಸೃಷ್ಟಿ ಕ್ರಿಯೆಯು ಸಹಜವಾಗಿ ಆರಂಭವಾಗಿರಬೇಕು. ಅಂದರೆ ಸೃಜನಶೀಲ ವ್ಯಕ್ತಿಗೆ ಸ್ವಾತಂತ್ರ್ಯ ಅನಿವಾರ್ಯವಾಗಿ ಇರಬೇಕು. ಸೃಷ್ಟಿಗೆ ಸ್ವಂತಿಕೆ ಅಥವಾ ಅನನ್ಯತೆಯಿರಬೇಕು. ಅದು ಇನ್ನಾರೋ ಮಾಡಿದುದರ ಅನುಕರಣೆಯಾಗಿರಬಾರದು. ಅನುಕರಣೆ ಕಲೆಯಲ್ಲ. ಅಂದರೆ ಕಲಾಕೃತಿ ಸೃಷ್ಟಿಯಲ್ಲಿ ಹೊಸತನವಿರಬೇಕು. ಈ ಕಲಾಕೃತಿ ಸೃಷ್ಟಿಯ ಪ್ರಕ್ರಿಯೆಯು ಒಂದು ಕ್ರೀಡೆಯಿದ್ದಂತೆ. ಕ್ರೀಡೆಯಲ್ಲಿನ ಆನಂದವೂ ಅದರಲ್ಲಿರುತ್ತದೆ.

ನಿಸರ್ಗದಲ್ಲಿನ ಸ್ವಾಭಾವಿಕ ಸೃಷ್ಟಿಗಳನ್ನು ಕಲೆ ಎನ್ನಲಾಗದು. ಕಲೆಗೆ ಮಾನವನ ಉದ್ದೇಶಿತ ಪ್ರಯತ್ನ ಇರಲೇಬೇಕು. ಆಕಾಶದಲ್ಲಿನ ಮೋಡಗಳಲ್ಲಿನ ಹಲವು ಬಗೆಯ ಆಕೃತಿಗಳು, ಅದರ ಮೇಲಿನ ನೆರಳು ಬೆಳಕಿನ ಯೋಜನೆ ನಮಗೆ ಇಷ್ಟವಾಗಬಹುದು. ಹಾಗಿದ್ದರೂ ಅದನ್ನು ಕಲಾಕೃತಿ ಎನ್ನಲಾಗದು. ಅಷ್ಟೇಕೆ ಸುಂದರವಾದ ಸೂರ್ಯಾಸ್ತದ ದೃಶ್ಯವೊಂದು ನಮ್ಮ ಮನಸ್ಸನ್ನು ಸೆಳೆಯಬಹುದು. ಅಲ್ಲಿನ ವರ್ಣಮೇಳ, ಆಕಾರ ಯೋಜನೆ, ಶೀತಲ ಪರಿಣಾಮ ಇತ್ಯಾದಿಗಳು ತುಂಬ ಆಕರ್ಷಕವಾಗಿರಬಹುದು. ಹಾಗಿದ್ದರೂ ಅವುಗಳನ್ನು ಕಲೆ ಎಂದು ನಾವು ಕರೆಯುವುದಿಲ್ಲ. ಅವುಗಳು ಭೌತ ನಿಯಮಗಳ ಅನ್ವಯ ನಡೆಯುವ ಸ್ವಾತಂತ್ರ್ಯ ರಹಿತ ಘಟನೆಗಳು. ಬೀಜದಿಂದ ಸಸಿ

ಮೊಳಕೆಯೊಡೆಯುವುದು, ಸ್ತ್ರೀ ಗರ್ಭದಿಂದ ಶಿಶುವಿನ ಜನನವಾಗುವುದನ್ನು ನಾವು ಕೆಲವೊಮ್ಮೆ ಸೃಷ್ಟಿಯೆಂದರೂ ಅದು ಕಲೆಯಲ್ಲ. ಈ ಎಲ್ಲ ಸಂದರ್ಭಗಳಲ್ಲಿ ಭೌತಿಕ ಗುಣವಾದ ಯಾಂತ್ರಿಕ ಪುನರ್ಘಟನೆಗಳು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ಹೀಗೆ ಪ್ರಕೃತಿಯಿಂದ ಭಿನ್ನವಾಗಿ ಬೌದ್ಧಿಕ ನೆಲೆಯಲ್ಲಿ ಮಾತ್ರ ಪೂರ್ಣ ಸ್ವತಂತ್ರವಾದ ಸೃಷ್ಟಿ ಸಾಧ್ಯ.

ಕಲಾನುಭವವು ಮೂಲತಃ ಒಂದು ಭಾವವೇ ಆದರೂ ಅದು ಇತರ ಪ್ರಾಪಂಚಿಕ ಭಾವನೆಗಳಿಂದ ಬೇರೆಯಾದುದು ಎಂದು ಕ್ಲೈವ್‌ಬೆಲ್ ಹೇಳುತ್ತಾನೆ. ಈ ವಿಶಿಷ್ಟ ಭಾವವನ್ನು ಅನುಭವಿಸದೇ, ಕಲಾಕೃತಿಯನ್ನು ನೋಡುವಾಗ ಅದರಲ್ಲಿ ಕೇವಲ ಪ್ರಾಪಂಚಿಕ ಭಾವಗಳನ್ನು ನೋಡ ಹೊರಟರೆ ನಮಗೆ ನಿಜವಾದ ಕಲಾನುಭವ ಸಿದ್ಧಿಸುವುದಿಲ್ಲ. ಕಲಾಕೃತಿಯನ್ನು ನೋಡುವಾಗ ಹೊಸದಾದ ಹಾಗೂ ವಿಶಿಷ್ಟವಾದ ಭಾವವನ್ನು ಅನುಭವಿಸದೇ, ಪ್ರಾಪಂಚಿಕ ಭಾವಗಳನ್ನೇ ಅದರಲ್ಲಿಯೂ ಕಾಣುವವರನ್ನು ಕ್ಲೈವ್‌ಬೆಲ್ ಕಟುವಾಗಿ ಟೀಕಿಸುತ್ತಾನೆ. "ಅವರು ಕಲಾಸೃಷ್ಟಿಯನ್ನು ಛಾಯಾಚಿತ್ರದಂತೆ ಪರಿಗಣಿಸುತ್ತಾರೆ; ಅದನ್ನು ನೋಡುವಾಗ ನೂತನ ಅಥವಾ ವಿಶಿಷ್ಟ ಅನುಭವದೆಡೆಗೆ ಸಾಗುವುದರ ಬದಲು ಪ್ರಾಪಂಚಿಕ ಅನುಭವಗಳನ್ನೇ ಅದರಲ್ಲಿ ಕಲ್ಪಿಸಿಕೊಂಡು ಅವುಗಳೆಡೆಗೇ ಸಾಗಿಹೋಗುತ್ತಾರೆ. ಈ ಕ್ಷುಲ್ಲಕವಾದ ಪ್ರಯೋಜನಕ್ಕೆ ಕಲೆಯನ್ನು ಬಳಸುವುದು ದಿನಪತ್ರಿಕೆಯನ್ನು ಓದಲು ದುರ್ಬೀನು ಬಳಸಿದಂತೆ. ಚಿತ್ರಕಲೆಯಂತೆಯೇ ಸಂಗೀತವನ್ನು ಅದರ ನಾದ ಸಂಯೋಜನಾ ಮಾಧುರ್ಯಕ್ಕೆ ಮೆಚ್ಚಬೇಕು" ಎಂದೂ ಅವನು ಹೇಳುತ್ತಾನೆ. ಇದರ ಉತ್ತುಂಗವನ್ನು ಅಮೂರ್ತ ಚಿತ್ರಗಳಲ್ಲಿ ಕಾಣಹುದು. ಹಲವು ಅಮೂರ್ತ ಚಿತ್ರಗಳಲ್ಲಿ ಅದರಲ್ಲೂ ಕ್ಯಾಂಡಿನ್‌ಸ್ಕಿ, ಪಾಲ್ ಕ್ಲೇ ಅವರ ಚಿತ್ರಗಳಲ್ಲಿ ಈ ಅಂಶಗಳೇ ಮುಖ್ಯವಾಗುತ್ತವೆ. ಕಲೆಯು ಅಭಿವ್ಯಕ್ತಿಯಾದರೂ, ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಕ್ರಿಯೆಗಳೆಲ್ಲವೂ ಕಲೆಯಲ್ಲ. ಕಲೆಗೂ ಇತರ ಕ್ರಿಯೆಗಳಿಗೂ ಇರುವ ವ್ಯತ್ಯಾಸವನ್ನು ತಮ್ಮ 'ಸೌಂದರ್ಯ ಮೀಮಾಂಸೆ' ಪುಸ್ತಕದಲ್ಲಿ ಡಾ|| ಶ್ರೀನಿವಾಸನ್ ಅವರು ಹೀಗೆ ವಿವರಿಸುತ್ತಾರೆ.

1. ನಮ್ಮ ಸಂತೋಷದ ಉದ್ಗಾರ ಅಥವಾ ಸಂಕಟದ ನಿಟ್ಟುಸಿರು ಇವು ಕಲೆಯೆನಿಸುವುದಿಲ್ಲ. ಏಕೆಂದರೆ, ಇವು ನಿಜಜೀವನದಲ್ಲಿ ನಡೆಯುವ ಘಟನೆಗಳಿಗೆ ನಮ್ಮ ಸಹಜ ಪ್ರತಿಕ್ರಿಯೆ. ಆದರೆ ಕಲೆ ಕಲ್ಪಿತ; ಅಭ್ಯಾಸದಿಂದ ಬರತಕ್ಕದ್ದು.
2. ನಾವು ಮಾರುಕಟ್ಟೆಯಲ್ಲಿ ಆಡುವ ಮಾತುಗಳಾಗಲಿ, ಒಬ್ಬ ಸೈನ್ಯಾಧಿಕಾರಿ ತನ್ನ ಸೈನ್ಯಕ್ಕೆ ಕೊಡುವ ಅಪ್ಪಣೆಯಾಗಲಿ ಕಲೆಯಲ್ಲ. ಏಕೆಂದರೆ, ಅವುಗಳ ಉದ್ದೇಶ ವ್ಯಾವಹಾರಿಕ. ಆದರೆ ಅವುಗಳನ್ನೇ ಒಬ್ಬ ಕಲಾವಿದನು ರಂಗಭೂಮಿಯ ಮೇಲೆ ನಟಿಸಿದಾಗ ಅವು ಕಲೆಯೆನಿಸುತ್ತವೆ. ಕಾರಣ, ರಸಾನುಭವವನ್ನುಂಟುಮಾಡುವುದೇ ನಟನೆಯ ಉದ್ದೇಶವಾಗಿರುತ್ತದೆ.

3. ವೈಜ್ಞಾನಿಕ ವಾಕ್ಯಗಳು ವಸ್ತುಗಳನ್ನೂ ಅವುಗಳ ಸಂಬಂಧಗಳನ್ನೂ ವಿವರಿಸುತ್ತವೆ; ಆದರೆ ಕಲೆಯು ಅವುಗಳನ್ನು ಕುರಿತು ವ್ಯಕ್ತಿಯಲ್ಲಿ ಬರುವ ಪ್ರತಿಕ್ರಿಯೆ, ಭಾವನೆಗಳನ್ನು ರಸವತ್ತಾಗಿ ಆನಂದದಾಯಕವಾಗಿ ವ್ಯಕ್ತಪಡಿಸುತ್ತದೆ.

4. ಕಲೆಯಲ್ಲಿ ವರ್ಣ-ರೇಖೆ ಅಥವಾ ನಾದಸಂಯೋಜನೆಯು ಭಾವನೆಗಳನ್ನು ಅಥವಾ ಅಂತರಾರ್ಥವನ್ನು ವ್ಯಕ್ತಪಡಿಸುವ ಮಾಧ್ಯಮವಾಗಿರುತ್ತದೆ; ಕಲೆಯಲ್ಲಿ ಇಂದ್ರಿಯಗಳಿಗೆ ಗೋಚರಿಸುವ ಈ ಮಾಧ್ಯಮಕ್ಕೆ ವಿಶಿಷ್ಟವಾದ ಪ್ರಾಮುಖ್ಯವಿದೆ. ಈ ಪ್ರಾಮುಖ್ಯವನ್ನು ನಾವು ಮನುಷ್ಯನ ಬೇರೆ ಕ್ರಿಯೆಗಳಲ್ಲಿ ನೋಡಲಾಗುವುದಿಲ್ಲ. ಉದಾಹರಣೆಗೆ, ವ್ಯಾವಹಾರಿಕ ಸಂಭಾಷಣೆಯಲ್ಲಿ ನಾವು ಪದಗಳನ್ನು ರಾಗವಾಗಿ ಉಚ್ಚರಿಸಬೇಕೆಂಬ ನಿಯಮವೇನೂ ಇಲ್ಲ; ಕಾರಣ, ಅದರಲ್ಲಿ ನಮಗೆ ವ್ಯಾವಹಾರಿಕ ಅರ್ಥ, ಉದ್ದೇಶ ಸಾಫಲ್ಯ ಮುಖ್ಯ. ಆದರೆ ಸಂಗೀತದಲ್ಲಿ ಅದೇ ಪದಗಳನ್ನು ರಾಗವಾಗಿ, ಕೇಳುವುದಕ್ಕೆ ಇಂಪಾಗಿ, ಉಚ್ಚರಿಸಬೇಕಾಗುತ್ತದೆ; ಇಲ್ಲದಿದ್ದರೆ ಅದು ಸಂಗೀತವೆನಿಸುವುದಿಲ್ಲ. ಹಾಗೆಯೇ, ನಿತ್ಯ ಜೀವನದಲ್ಲಿ ಒಂದು ವಸ್ತುವಿನ ಬಣ್ಣ ಅಥವಾ ನಮಗೆ ವ್ಯಾವಹಾರಿಕ ಉಪಯೋಗಕ್ಕೆ ಮಾತ್ರ ಸೂಚಕವಾಗಿರುತ್ತದೆ; ಆದರೆ ವಸ್ತುವಿನ ಚಿತ್ರವನ್ನು ನೋಡುವಾಗ ಅದರ ಬಣ್ಣ ಅಥವಾ ರೂಪವು ನಮಗೆ ವ್ಯಾವಹಾರಿಕ ಉಪಯೋಗಕ್ಕೆ ಮಾತ್ರ ಸೂಚಕವಾಗಿರುತ್ತದೆ; ಆದರೆ ಅದೇ ವಸ್ತುವಿನ ಚಿತ್ರವನ್ನು ನೋಡುವಾಗ ಅದರ ಬಣ್ಣ ಮತ್ತು ಆಕಾರಗಳನ್ನು ನೋಡುವುದರಲ್ಲಿಯೇ ನಮಗೆ ಆನಂದದ ಅನುಭವವಾಗುತ್ತದೆ. ಈ ರೀತಿ ಕಲೆಯಲ್ಲಿ ಮಾಧ್ಯಮವು ಅತಿಮುಖ್ಯವಾದ್ದರಿಂದ ಕಲಾಕಾರನು ತನ್ನ ಭಾವನೆಗಳನ್ನು ಅದರ ಮೂಲಕ ವ್ಯಕ್ತಪಡಿಸುವ ಸಲುವಾಗಿ ಅದನ್ನು ಸಾಧ್ಯವಾದಷ್ಟೂ ಆಕರ್ಷಣೀಯವಾಗಿ, ಸುಂದರವಾಗಿ ರಚಿಸಲು ಪ್ರಯತ್ನಿಸುತ್ತಾನೆ. ಅನೇಕ ವೇಳೆ ಅತ್ಯಂತ ಸುಂದರವಾದ ಮಾಧ್ಯಮದ ಮೂಲಕ ಕಲಾಕಾರನು ತನ್ನ ವೀಕ್ಷಕರಿಗೆ ಸಾಮಾನ್ಯ ಸಂದರ್ಭಗಳಲ್ಲಿ ರಚಿಸದೇ ಹೋಗಬಹುದಾದ ಭಾವನೆಗಳನ್ನು ಅವರ ಮನಮುಟ್ಟುವಂತೆ, ಅವರಿಗೆ ರುಚಿಸುವಂತೆ ವ್ಯಕ್ತಪಡಿಸಲು ಶಕ್ತನಾಗುತ್ತಾನೆ. ತನ್ನ ಮಾಧ್ಯಮದ ವಿಷಯದಲ್ಲಿ ಕಲಾಕಾರನಿಗಿರುವ ಆಸಕ್ತಿ, ಕುಶಲತೆಗಳಿಂದಲೇ ಅವನ ಕಲೆಯು ಇತರ ಎಲ್ಲಾ ಮಾನವ ಕ್ರಿಯೆಗಳಿಂದಲೂ ಭಿನ್ನವಾದ, ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ.

5. ಕಲೆಯಲ್ಲಿ ಬೇರೆಡೆಗಳಲ್ಲಿ ಕಾಣದಿರುವ ಭಾವರೂಪಕವಾದ ಸಂಬಂಧವನ್ನು ನಾವು ಕಾಣುತ್ತೇವೆ. ಉದಾಹರಣೆಗೆ, ಸಾಧಾರಣ ಸಂಭಾಷಣೆಯ ವಾಕ್ಯಗಳಲ್ಲಿ ವ್ಯಾಕರಣಬದ್ಧವಾದ ಸಂಬಂಧವಿರುತ್ತದೆ; ಹಾಗೆಯೇ, ಬೌದ್ಧಿಕ ಪ್ರಬಂಧಗಳಲ್ಲಿ ತಾರ್ಕಿಕ ಸಂಬಂಧವಿರುತ್ತದೆ; ಆದರೆ, ಸಂಗೀತದಲ್ಲಿ ಇವಕ್ಕಿಂತಲೂ ಮೇಲಾಗಿ

ರಾಗ ಅಥವಾ ಭಾವರೂಪಕವಾದ ಸಂಬಂಧವನ್ನು ಕಾಣುತ್ತೇವೆ. ಇತಿಹಾಸಕಾರನು ನಡೆದುಹೋದ ಘಟನೆಗಳ ಅಥವಾ ಯುದ್ಧಗಳನ್ನು ಕುರಿತು ಬರೆಯುವ ಚರಿತ್ರೆಯಲ್ಲಿ ನಮಗೆ ಕಂಡುಬರುವುದು ಕಾಲಾನುಕ್ರಮದಲ್ಲಿ ಸಂಭವಿಸಿದ ಘಟನೆಗಳ ಪರಂಪರೆ; ಆದರೆ ಒಬ್ಬ ಕವಿಯು ಅದೇ ಘಟನೆಗಳನ್ನು ತನ್ನದೇ ಆದ ಸಜೀವ ಭಾವದಲ್ಲಿ ಅಳವಡಿಸಿ ಅದಕ್ಕೆ ನವಚೇತನವನ್ನು ತುಂಬಿ ಜೀವಂತವನ್ನಾಗಿ ಮಾಡುತ್ತಾನೆ.

6. ಒಬ್ಬ ವ್ಯಕ್ತಿಯು ತನ್ನ ಕಷ್ಟ ಸುಖಗಳನ್ನು ಒಬ್ಬ ಸ್ನೇಹಿತನೊಡನೆ ತೋಡಿಕೊಂಡರೆ ಅದು ಕಲೆಯೆನಿಸುವುದಿಲ್ಲ. ಏಕೆಂದರೆ, ಕಲಾಕಾರನು ಕಲೆಯಲ್ಲಿ ವ್ಯಕ್ತಪಡಿಸುವುದು ತನ್ನ ಸ್ವಂತ ಕಷ್ಟಸುಖಗಳನ್ನಲ್ಲ; ಭಾವಗಳನ್ನು. ಒಂದು ವೇಳೆ ತನ್ನ ಸ್ವಂತ ಅನುಭವ ಅಥವಾ ಭಾವನೆಗಳನ್ನೇ ವ್ಯಕ್ತಪಡಿಸಬೇಕಾದರೂ, ಕಲಾಕಾರನು ಅವುಗಳನ್ನು ವೈಯಕ್ತಿಕ ಚೌಕಟ್ಟಿನಿಂದ ಬಿಡುಗಡೆ ಮಾಡಿ, ಯಾರಿಗಾದರೂ ಅನ್ವಯಿಸುವಂತೆ ಸಾಧಾರಣೀಕರಿಸಿ ವ್ಯಕ್ತಪಡಿಸುತ್ತಾನೆ. ಉದಾಹರಣೆಗೆ, ಕೆಲವು ಕತೆಗಾರರು ತಮ್ಮ ವೈಯಕ್ತಿಕ ಅನುಭವ ಮತ್ತು ಪ್ರತಿಕ್ರಿಯೆಗಳನ್ನು ಕಾಲ್ಪನಿಕ ಘಟನೆ ಮತ್ತು ವ್ಯಕ್ತಿತ್ವಗಳ ಮೂಲಕ ವ್ಯಕ್ತಪಡಿಸಬಹುದು. ಇದರಿಂದ ಓದುಗನಿಗೆ ಕಥೆಯಲ್ಲಿ ಬರುವ ಅನುಭವಗಳನ್ನು ತನ್ನದಾಗಿಯೇ ಮಾಡಿಕೊಂಡು ಅನುಭವಿಸುವಂತಾಗುತ್ತದೆ."

ಸಾಮಾನ್ಯವಾಗಿ ಕಲಾವಿದರು ತಮ್ಮ ವೈಯಕ್ತಿಕ ಅನುಭವಗಳನ್ನು, ಧೋರಣೆಗಳನ್ನು ಅಭಿವ್ಯಕ್ತಿಸುತ್ತಿದ್ದು ಅದು ಹೆಚ್ಚಾಗಿ ಸ್ವಪ್ರೇರಿತವುಳ್ಳದ್ದಾಗಿರುತ್ತದೆ. ಅವರು ಹೊಸ ರೀತಿಯ ಅಭಿವ್ಯಕ್ತಿಗೆ ಪ್ರಯತ್ನಿಸುವುದರಿಂದ, ಅದು ಸಾಮಾನ್ಯವಾಗಿ ಆಯಾ ಸಮಾಜದ ಸಂಸ್ಕೃತಿಯ ಒಪ್ಪಿತ ಆದರ್ಶಗಳಿಂದ ಭಿನ್ನವಾಗಿರುವುದರಿಂದ ಆ ರೀತಿಯ ಸೃಷ್ಟಿಗಳು ಪರಕೀಯವೆನಿಸುವುದು ಸ್ವಾಭಾವಿಕ. ಸೃಜನಶೀಲ ಕಲಾವಿದರು ಚಲಾವಣೆಯಲ್ಲಿರುವ ಕಲಾಪ್ರಕಾರಗಳಲ್ಲಿನ ಶೈಲಿ, ತಂತ್ರ, ನಿರ್ವಹಣೆಗಳಿಗಿಂತ ಮುಂದೆ ಹೋಗಲು ಪ್ರಯತ್ನಿಸುತ್ತಾರೆ. ಈ ಕಾರಣಕ್ಕಾಗಿಯೇ ಹೆಚ್ಚಿನ ಸೃಜನಶೀಲ ಕಲಾವಿದರ ಕೃತಿಗಳನ್ನು ಬಹುತೇಕ ಜನ ಅರ್ಥಮಾಡಿಕೊಳ್ಳುವುದಿಲ್ಲ. ಏಕೆಂದರೆ ಈ ಮೊದಲೇ ಹೇಳಿದಂತೆ ಈ ಕಲಾವಿದರ ದೃಷ್ಟಿಕೋನ, ಸಂಕೇತಗಳು ಮತ್ತು ಶೈಲಿಗಳು ಈಗಾಗಲೇ ಒಪ್ಪಿತವಾದಂತಹ ಸಾಮಾಜಿಕ 'ನೋಡುವಿಕೆ' ಮತ್ತು ಅನುಭವಗಳಿಂದ ಭಿನ್ನವಾಗಿರುತ್ತದೆ. ತಮ್ಮ ಧೋರಣೆ, ಅನುಭವಗಳಿಂದ ಭಿನ್ನವಾದಂತಹ ಈ ಸೃಜನಶೀಲ ಸೃಷ್ಟಿಗಳನ್ನು ಒಪ್ಪಿಕೊಳ್ಳುವುದು ಬಹಳಷ್ಟು ಜನರಿಗೆ ಕಷ್ಟವಾಗುತ್ತದೆ. ಈ ಕಾರಣಕ್ಕಾಗಿಯೇ ಜನಪ್ರಿಯ ಕಲೆಗಳಂತೆ ಈ ಸೃಜನಶೀಲ ಕೃತಿಗಳು ಜನಪ್ರಿಯವಾಗುವುದು ವಿರಳ.

ಯಾವುದೇ ಚಿತ್ರ, ಶಿಲ್ಪ ಕಲಾಕೃತಿಯಲ್ಲಿ ಮುಖ್ಯವಾಗಿ ಎರಡು ಭಾಗಗಳಿರುತ್ತವೆ. ಒಂದು ಭೌತಿಕ ವಿವರಗಳ ಸಂಯೋಜನೆ, ಎರಡನೆಯದು ಹೊರಗೆ ನೇರವಾಗಿ

ಕಾಣದಂತಹ ಅಂತರ್ಗತ ಭಾವನೆಗಳು; ಕೃತಿಯು ಬಚ್ಚಿಟ್ಟುಕೊಂಡ ಅಂಶಗಳು. ಕಲಾಕೃತಿಯೊಂದನ್ನು ವಿಶ್ಲೇಷಿಸಲು ಹಲವು ವಿಧಾನಗಳಿವೆ. ಒಂದು ನಿರ್ದಿಷ್ಟ ಕಲಾಕೃತಿಯಲ್ಲಿರುವ ಭೌತಿಕ ಅಂಶಗಳನ್ನು ಬೇರ್ಪಡಿಸಿ, ಈ ಭೌತಿಕ ಅಂಶಗಳಲ್ಲಿ ಪ್ರತಿಯೊಂದನ್ನು ಇನ್ನೊಂದಕ್ಕೆ ಹೋಲಿಸಿ ಪರಿಶೀಲಿಸಬಹುದು. ಹೀಗೆ ಯಾವುದೇ ಕಲಾಕೃತಿಯಲ್ಲಿ ಈ ರೀತಿಯ ಐದು ಅಂಶಗಳು ಮುಖ್ಯವಾಗಿರುತ್ತವೆ. ರೇಖೆಗಳ ಛಂದೋಗತಿ(ತರಂಗಧಾಟಿ), ಆಕಾರಗಳ ಅವಕಾಶ ಅಥವಾ ತೆರಪು(space), ನೆರಳು-ಬೆಳಕಿನ ಯೋಜನೆ, ವರ್ಣಗಳ ಒಟ್ಟು ಮೊತ್ತ. ಹಲವೊಮ್ಮೆ ಕಲಾಕೃತಿಯೊಂದು ರೂಪ ಅಥವಾ ಪರಿಚಿತ ವಸ್ತುಗಳ ಸಂಕ್ಷೇಪಿತ ರೂಪ ಅಥವಾ ಸಾರಾಂಶ(ತಿರುಳು) ಆಗಿರಬಹುದು. ಅಥವಾ ಅದು ಕ್ರಮ, ವೈವಿಧ್ಯ, ತೀವ್ರತೆ, ಉದ್ರೇಕ ಮುಂತಾದುವುಗಳನ್ನು ನಮ್ಮಲ್ಲಿ ಉಂಟುಮಾಡಬಲ್ಲಂತಹ, ನಮ್ಮನ್ನು ಪ್ರಭಾವಿಸಬಲ್ಲಂತಹ ಆಕಾರಗಳು, ರೇಖೆಗಳು, ಮೈವಳಿಕೆಗಳು ಮುಂತಾದ ಪ್ರೇಕ್ಷ್ಯ(visual) ಅಂಶಗಳನ್ನು ಶುದ್ಧ ಓರಣವಾಗಿರಿಸಿದ್ದಾಗಿರಬಹುದು. ಕಲಾಕೃತಿಯೊಂದರಿಂದ ನೋಡುಗನೊಬ್ಬನಿಗೆ ಬರುವ ಸಂದೇಶದ ಅಥವಾ ಅನುಭವದ ಮಟ್ಟವು ಅಲ್ಲಿನ ಒಟ್ಟು ವಿನ್ಯಾಸ ಯೋಜನೆಯನ್ನು ಅವಲಂಬಿಸಿರುತ್ತದೆ. ಈ ವಿನ್ಯಾಸ ಯೋಜನೆಯು ಆ ಸಂದೇಶದ ಅಥವಾ ಅನುಭವದ ವಾಹಕವಾಗಿ ಕೆಲಸ ಮಾಡುತ್ತದೆ. ಆ ಸಂದೇಶದ ಪರಿಣಾಮವು ಒಂದೆಡೆ ವಿನ್ಯಾಸ ಯೋಜನೆಯನ್ನು ಅವಲಂಬಿಸಿದ್ದರೆ, ಇನ್ನೊಂದೆಡೆ ಅದನ್ನು ನೋಡುವಲ್ಲಿ ನೋಡುಗ ಎಷ್ಟರ ಮಟ್ಟಿಗೆ ಸಿದ್ಧಗೊಂಡಿದ್ದಾನೆಂಬುದನ್ನು ಅವಲಂಬಿಸಿರುತ್ತದೆ. ಕೆಲವರು ಆ ಸಂದೇಶದ ಅಥವಾ ಅನುಭವದ ಕೆಲವು ಭಾಗಗಳಿಗೆ ಮಾತ್ರ ಸ್ಪಂದಿಸಿದರೆ, ಇನ್ನು ಕೆಲವರು ಅಲ್ಲಿನ ವಸ್ತು-ವಿಷಯಕ್ಕೆ ಸ್ಪಂದಿಸಬಹುದು. ಮತ್ತೆ ಕೆಲವರು ಅಲ್ಲಿನ ಭಾವನಾತ್ಮಕ ಪರಿಣಾಮಗಳಿಗೆ; ಮತ್ತೆ ಕೆಲವರು ಸೌಂದರ್ಯದ ಹೊಂದಾಣಿಕೆಗಳಿಗೆ ಸ್ಪಂದಿಸಬಹುದು. ಕೆಲವರು ಈ ಎಲ್ಲವುಗಳನ್ನು ಸ್ವೀಕರಿಸಬಲ್ಲವರಾದರೆ, ಮತ್ತೆ ಕೆಲವರು ಈ ಯಾವುದನ್ನೂ ಗ್ರಹಿಸದೇ ಇರುವ ಸಾಧ್ಯತೆಗಳೂ ಇವೆ.

ಯಾವುದೇ ಕೃತಿಯ ಮೌಲ್ಯಮಾಪನ ಮಾಡುವಂತಹ ದೃಷ್ಟಿಯನ್ನು ಬೆಳೆಸಿಕೊಳ್ಳಲು ನಾವು ಅದರ ಮುಖ್ಯ ಅಂಶಗಳನ್ನು ಅರಿಯಬೇಕು. ಎಲ್ಲ ಕಲಾಕೃತಿಗಳೂ ಕಲ್ಪನೆಗಳನ್ನು ಸಂವಹನಗೊಳಿಸುವ ಉದ್ದೇಶ ಹೊಂದಿದ್ದರೂ ಅವುಗಳ ಕಾರ್ಯಾಶಯಗಳಲ್ಲಿ ವ್ಯತ್ಯಾಸವಿರುತ್ತದೆ. ಚರ್ವಿತ ಚರ್ವಣವಾದ ಅಥವಾ ಹಳಸಲಾದ ಶೈಲಿ, ಮಿತಿಮೀರಿ ಬಳಸಲ್ಪಟ್ಟ ಪ್ರತಿಮೆಗಳು, ಪ್ರತೀಕಗಳು, ಸಂಕೇತಗಳು ತಮ್ಮ ಕುತೂಹಲವನ್ನು ಕಳೆದುಕೊಂಡಿರುತ್ತವೆ. ಆದ್ದರಿಂದ ಚಲನಶೀಲತೆ ಮತ್ತು ಹೊಸತನಗಳು ಯಾವುದೇ ಕಲೆಯ ಮುಖ್ಯ ಬಂಡವಾಳವಾಗಿರುತ್ತದೆ.

ಹೀಗೆ ಶತಮಾನಗಳಿಂದ ದೃಶ್ಯಕಲೆಗಳನ್ನು ಕುರಿತು ಚಿಂತನೆ ನಡೆಯುತ್ತಲೇ ಇದೆ. ಆಯಾ ಯುಗದ ಆಶಯ, ಧೋರಣೆಗಳಿಗೆ ತಕ್ಕಂತೆ ಕಲೆಯ ಪರಿಭಾಷೆ, ಆಶಯಗಳೂ

ಬದಲಾಗುತ್ತ ಸಾಗಿದೆ. ಹಾಗಾಗಿ ಕಲೆಯ ಮಾನದಂಡಗಳನ್ನು ನಿರ್ಮಿಸುವಲ್ಲಿ 'ಕಾಲ' ತುಂಬ ಮುಖ್ಯ ಪಾತ್ರ ವಹಿಸುತ್ತದೆ. ಇದನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡೇ ನಾವು ಕಲಾಕೃತಿಗಳೊಂದಿಗೆ ಮುಖಾಮುಖಿಯಾಗಬೇಕು. ಹೀಗೆ ಕಲೆ ಎಂದರೇನು? ಎಂದು ತಿಳಿದುಕೊಳ್ಳಲು ನಮ್ಮನ್ನು ಸಿದ್ಧಗೊಳಿಸಿಕೊಳ್ಳಬೇಕು. ಅದಿಲ್ಲದೆ "ನವ್ಯ ಕಲಾಕೃತಿಗಳು ನನಗೆ ಅರ್ಥವಾಗುವುದಿಲ್ಲ; ಅವು ನನಗೆ ಮೆಚ್ಚುಗೆಯಾಗುವುದಿಲ್ಲ" ಎಂದು ಸುಮ್ಮನೆ ಹೇಳುವವರ ಮಾತನ್ನು ಒಪ್ಪಲಾಗುವುದಿಲ್ಲ. ಯಾವುದೇ ಕಲೆಗಳಾದರೂ ಅದರಲ್ಲಿ ಕಲಾವಿದ ಏನನ್ನು ಸೃಷ್ಟಿಸಿದ್ದಾನೆ, ಹೇಗೆ ಸೃಷ್ಟಿಸಿದ್ದಾನೆ. ಅವನ ಉದ್ದೇಶ ಏನಿರಬಹುದು, ತನ್ನ ಮಾಧ್ಯಮದ ಮೂಲಕ ಅದನ್ನು ಯಶಸ್ವಿಯಾಗಿ ಚಿತ್ರಿಸಿದ್ದಾನೆಯೇ ಎಂಬ ಪ್ರಶ್ನೆಗಳಿಗೆ ನಾವು ಉತ್ತರ ಹುಡುಕಿಕೊಳ್ಳಬೇಕು. ನಾವು ಅವುಗಳಿಗೆ ಉತ್ತರ ಹುಡುಕುವ ಯತ್ನ ಮಾಡಿದಾಗಲೇ ಆಯಾಯ ಕಲೆಗಳು ನಮಗೆ ಕೊಡಬಲ್ಲ ಸುಖ, ಸೊಬಗು, ತೃಪ್ತಿಗಳನ್ನು ಪಡೆಯಬಹುದು. ಆ ರೀತಿಯ ಕಣ್ಣನ್ನು ನಾವು ಬೆಳೆಸಿಕೊಳ್ಳದಿದ್ದರೆ ನಾವು ಕಣ್ಣಿದ್ದೂ ಕುರುಡರಾಗುತ್ತೇವೆ. ಅಂಧರು ಹೇಗೆ ದೃಶ್ಯಗಳ ಮೂಲಕ ಜಗತ್ತನ್ನು ಗ್ರಹಿಸಲಾರರೋ ಹಾಗೆಯೇ ನವ್ಯ ಕಲೆಗಳ ಸಂದರ್ಭದಲ್ಲಿ ನಾವೂ ಕುರುಡರೆನ್ನಿಸಿಕೊಳ್ಳುತ್ತೇವೆ. ಜಗತ್ತಿನ ಕಲಾಕೃತಿಗಳಿಂದ ನಮಗೆ ದೊರೆಯುವ ಸೌಂದರ್ಯಾನುಭವದಿಂದ ವಂಚಿತರಾಗುತ್ತೇವೆ. ಆದ್ದರಿಂದ ಕಲೆ ಅಪೇಕ್ಷಿಸುವಂತಹ ದಿಸೆಯಲ್ಲಿ ನಮ್ಮ ಮನಸ್ಸುಗಳನ್ನು ಸಿದ್ಧಗೊಳಿಸಿಕೊಳ್ಳುವುದು ಇಂದಿನ ಅನಿವಾರ್ಯವಾಗಿದೆ.

ಇಂದು ಕಲೆ ಹಾಗೂ ಜನಸಾಮಾನ್ಯರ ನಡುವೆ ಭಾರೀ ಅಂತರವಿದೆ. ಇಂದಿನ ಸಮಕಾಲೀನ ಕಲೆಯು ಜನಸಾಮಾನ್ಯರಿಗೆ ಅರ್ಥವಾಗದಿರುವುದೇ ಇದಕ್ಕೆ ಕಾರಣ ಎಂದು ಹಲವರ ಅಭಿಪ್ರಾಯ. ದೃಶ್ಯ ಕಲೆಗಳನ್ನು ಆಸ್ವಾದಿಸುವ ದೃಷ್ಟಿಯಿಂದ ನಮ್ಮ ಸಾಮಾನ್ಯ ಶಿಕ್ಷಣದಲ್ಲೂ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ. ಅಂತೆಯೇ ಈ ಕೊರತೆಗಳನ್ನು ಸ್ವಲ್ಪವಾದರೂ ತುಂಬುವುದು ಈ ಜನಪ್ರಿಯ ಕಲಾಮಾಲಿಕೆಯ ಆಶಯ. ಹೀಗೆ ಸಾಮಾನ್ಯರಿಗೆ ದೃಶ್ಯಕಲೆಗಳ ಪ್ರಾಥಮಿಕ ಜ್ಞಾನ ಒದಗಿಸುವ ದೃಷ್ಟಿಯಿಂದಲೇ ಇದನ್ನು ರೂಪಿಸಲಾಗಿದೆ. ಇದರಲ್ಲಿ ದೃಶ್ಯಕಲೆಯ ತಾತ್ವಿಕ ಅಂಶಗಳು, ಮಾಧ್ಯಮಗಳು, ತಂತ್ರಗಳು, ಇತಿಹಾಸ, ಆಧುನಿಕ ಕಲಾ ಪಂಥಗಳು ಇತ್ಯಾದಿ ಹಲವು ವಿಷಯಗಳನ್ನು ಕುರಿತಂತಹ ಹೊತ್ತಿಗೆಗಳನ್ನು ತರುತ್ತಿದ್ದೇವೆ. ತನ್ಮೂಲಕ ದೃಶ್ಯಕಲೆಯನ್ನು ಆಸ್ವಾದಿಸುವ ದಿಸೆಯಲ್ಲಿ ಹೆಚ್ಚಿನ ಜನರು ತೊಡಗುತ್ತಾರೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದು. ಹೀಗೆ ಜನರನ್ನು 'ಸಹೃದಯ' ರನ್ನಾಗಿಸುವ ದಿಸೆಯಲ್ಲಿ ಇದೊಂದು ಪುಟ್ಟ ಪ್ರಯತ್ನ.

ಚಿ. ಸು. ಕೃಷ್ಣ ಸೆಟ್ಟಿ
ಸಂಪಾದಕರು